ವಿಜಯಪುರ | ಸಂಪುಟ 04 | ಸಂಚಿಕೆ 198 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily


ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಸೆಪ್ಟೆಂಬರ್, 29, 2026



"ಕಾಂಗ್ರೆಸ್ ಪಕ್ಷ ಗೆಲ್ಲಲು ಸಾಧ್ಯವಿಲ್ಲ ಎಂಬ ಭ್ರಮನಿರಸನದಿಂದ ರಾಹುಲ್ ಗಾಂಧಿ ಅವರು ನ್ಯಾಯಾಲಯ, ಜಾರಿ ನಿರ್ದೇಶನಾಲಯ (ಇಡಿ), ಸಿಬಿಐ ಮತ್ತು ಚುನಾವಣಾ ಆಯೋಗದ ವಿರುದ್ಧ ಮಾತನಾಡುವ ಚಟಕ್ಕೆ ಬಲಿಯಾಗಿದ್ದಾರೆ. ಚುನಾವಣಾ ಫಲಿತಾಂಶಗಳು ತಮ್ಮ ಪರವಾಗಿಲ್ಲದಿದ್ದಾಗಲೆಲ್ಲಾ ಕಾಂಗ್ರೆಸ್ ನಾಯಕರು ಈ ಸಂಸ್ಥೆಗಳನ್ನೇ ಪ್ರಶ್ನಿಸುತ್ತಾರೆ."

■ ಆರ್. ಅಶೋಕ್
ವಿಪಕ್ಷ ನಾಯಕರು

## ರೈತರ ಆರ್ಥಿಕ ಸ್ವಾವಲಂಬನೆಗೆ ಹೊಸ ಹೆಜ್ಜೆ




### ಮುದ್ದೇಬಿಹಾಳದಲ್ಲಿ ಕೊಪ್ಪಳದ ಗವಿಸಿದ್ದೇಶ್ವರರ ಹಸ್ತಾಕ್ಷರದಿಂದ ದಾಸೋಹಿ ಸಹಕಾರಿಗೆ ವಿದ್ಯುಕ್ತ ಚಾಲನೆ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ನಗರದಲ್ಲಿ ಸ್ಥಾಪಿತವಾದ ದಾಸೋಹಿ ರೈತ ಉತ್ಪಾದಕ ಸಹಕಾರಿ ಸಂಘದ ಆರ್ಥಿಕ ವ್ಯವಹಾರಗಳಿಗೆ ತಮ್ಮ ಪವಿತ್ರ ಹಸ್ತಾಕ್ಷರದ ಮೂಲಕ ಕೊಪ್ಪಳದ ಗವಿಸಿದ್ದೇಶ್ವರ ಮಠದ ಅಭಿನವ ಗವಿ ಸಿದ್ದೇಶ್ವರ ಮಹಾಸ್ವಾಮಿಗಳು ವಿದ್ಯುಕ್ತ ಚಾಲನೆ ನೀಡಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ದಾಸೋಹಿ ರೈತ ಉತ್ಪಾದಕ ಸಮೂಹ ಸಂಸ್ಥೆಗಳ ಕಛೇರಿಯಲ್ಲಿ ನಡೆದ ಸಮಾರಂಭದಲ್ಲಿ ರೈತರ ಅಗತ್ಯತೆಗೆ ಪೂರಕ ಆರ್ಥಿಕ ನೆರವು ಒದಗಿಸಲು ಮತ್ತು ವ್ಯವಹಾರಿಕ ಚಟುವಟಿಕೆಗಳಿಗೆ ಸಹಕಾರ ನೀಡುವ ಉದ್ದೇಶದಿಂದ ಅಸ್ತಿತ್ವ ಪಡೆದ ನೂತನ ದಾಸೋಹಿ ರೈತ ಉತ್ಪಾದಕ ಸಹಕಾರಿ ಸಂಘವನ್ನು ಉದ್ಘಾಟಿಸಿದ ಅವರು ರೈತರೇ ಸೇರಿ ಕಟ್ಟಿದ ಸಂಸ್ಥೆಯ ಮೂಲಕ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಉನ್ನತೀಕರಣಕ್ಕೆ ನಡೆಸುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿದರು.

ರೈತರ ಒಡೆತನದಲ್ಲಿ ಸಮೃದ್ಧಿಯತ್ತ ನಡಿಗೆ ಎಂಬ ಧ್ಯೇಯ ವಾಕ್ಯದೊಂದಿಗೆ ರೈತರ ಆರ್ಥಿಕ ಬಲವರ್ಧನೆ, ಗ್ರಾಮೀಣ ಉದ್ಯಮ ಶೀಲತೆ ಮತ್ತು ಸುಸ್ಥಿರ ಸಮೃದ್ಧಿಯತ್ತ ಸಹಕಾರದ ಮೂಲಕ ಸಾಗುವುದರೊಂದಿಗೆ ಉತ್ತರೋತ್ತರ ಅಸಂಖ್ಯಾತ ರೈತರ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ದಾಸೋಹಿಯ ಹೆಸರು ಚಿರಸ್ಥಾಯಿಯಾಗಲೆಂದು ಆಶೀರ್ವದಿಸಿದರು.

ಈ ಮೊದಲು ದಾಸೋಹಿ ಸಮೂಹ ಸಂಸ್ಥೆಗಳ ರೈತಕೇಂದ್ರೀಕೃತ ಚಟುವಟಿಕೆಗಳು, ಸೇವೆಗಳು ಹಾಗೂ ಸೌಲಭ್ಯಗಳ ಬಗ್ಗೆ ತಿಳಿದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ದಾಸೋಹಿ ಸಮೂಹ ಸಂಸ್ಥೆಗಳ ರೂವಾರಿ ಅರವಿಂದ ಕೊಪ್ಪ, ಕುಕ್ಕುಟ ಕಂಪನಿಯ ಚರ್ಮನ್ ರಶ್ಮಿ ಕೊಪ್ಪ, ಉಪಾಧ್ಯಕ್ಷ ಆರ್.ಬಿ.ಸಜ್ಜನ, ಸಹಕಾರಿ ಸಂಘದ ಉಪಾಧ್ಯಕ್ಷ ಮಂಜುನಾಥ ಕಳಸಗೊಂಡ, ನಿರ್ದೇಶಕರಾದ ಅಮರೇಶ ಹಟ್ಟಿ, ಸಿದ್ದಪ್ಪ ಕುರಿ, ಕಾಶೀನಾಥ ಹೆಬ್ಬಾಳ, ಭೀಮಾಶಂಕರಗೌಡ ಪಾಟೀಲ, ಗುರುಬಸಪ್ಪಗೌಡ ಪಾಟೀಲ, ಪ್ರೀತಿ ದೇಗಿನಾಳ, ಕಲ್ಲನಗೌಡ ಹಗರಟಗಿ, ಕಾಂತು ಲಮಾಣಿ, ಮಲ್ಲಣ್ಣ ಮಂಗ್ಯಾಳ, ಬಸವರಾಜ ಸಿದ್ದಾಪೂರ, ಲೇಶಪ್ಪ ಪ್ಯಾಟಿಗೌಡರ, ಕಂಪನಿ ನಿರ್ದೇಶಕರಾದ ಕಲ್ಲಣ್ಣ ಪ್ಯಾಟಿ, ಜಗದೀಶ ಪಂಪಣ್ಣವರ, ಗೋಲಪ್ಪ ಗಂಗನಗೌಡ್ರ, ಸೋಮನಗೌಡ ಬಿರಾದಾರ(ಮಡಿಕೇಶ್ವರ), ಶ್ರೀಶೈಲ ಮೇಟಿ(ಚೊಂಡಿ), ಪ್ರಭುದೇವಯ್ಯ ಹಿರೇಮಠ, ಬಸವರಾಜ ಕುಂಟೋಜಿ, ಭೀಮಣ್ಣ ಮಳಗೌಡರ, ರವೀಂದ್ರ ಕೋಳೂರ, ಪರಸಪ್ಪ ಮೇಟಿ, ಗುಂಡಪ್ಪ ಬಿರಾದಾರ, ಡಾ. ವಿಜಯ ಹುಬ್ಬಳ್ಳಿ, ಕಾರ್ಯನಿರ್ವಾಹಕ ಮಂಡಳಿ ಅಧ್ಯಕ್ಷ ಸಿ.ಆರ್ ಬಿರಾದಾರ, ಉಪಾಧ್ಯಕ್ಷ ಬಿ.ಎಂ ಪಾಟೀಲ ಸೇರಿದಂತೆ ದಾಸೋಹಿ ಸಮೂಹ ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರು, ಸಿಬ್ಬಂದಿ ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

ನಾಗರತ್ನಾ ಅರಮನಿ ಸ್ವಾಗತಿಸಿದರು ಡಾ. ರಾಜಶೇಖರ ಹತ್ತರಸಂಗ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರಶ್ಮಿ ಗೋನಾಳ ಕಾರ್ಯಕ್ರಮ ನಿರೂಪಿಸಿದರು. ಶೇಖರಗೌಡ ವಂದಿಸಿದರು.

# ನಿಯೋಗದ ಜತೆ ಬಿಜೆಪಿ ಬರದಿದ್ದರೆ ಕಪಟ ನಾಟಕ ಸಾಬೀತು

### ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಕೆಗೆ ಸಿದ್ಧತೆ। ಕೇಂದ್ರದಿಂದ ಬರ ನೆರವಿಗಾಗಿ ದೆಹಲಿಗೆ ಸರ್ವಪಕ್ಷ ನಿಯೋಗ। ಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆ



ಬೆಂಗಳೂರು: ರಾಜ್ಯದ ಬರ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ಸರ್ವಪಕ್ಷ ನಿಯೋಗದೊಂದಿಗೆ ಬಾರದಿದ್ದರೆ, ಬಿಜೆಪಿಯವರದ್ದು ಕಪಟ ನಾಟಕ ಎಂಬುದು ಸಾಬೀತಾಗುತ್ತದೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಬಿಜೆಪಿ ನಾಯಕರು ಮನವರಿಕೆ ಮಾಡಿಕೊಡದಿದ್ದರೆ, ರೈತರ ಹಿತಕ್ಕಾಗಿ ನಾವೇ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಬರ ವಿಚಾರದಲ್ಲಿ ಸರ್ವಪಕ್ಷ ನಿಯೋಗದೊಂದಿಗೆ ವಿರೋಧ ಪಕ್ಷಗಳು ಸೇರದಿದ್ದರೆ, ರೈತರ ಹಿತಾಸಕ್ತಿಯನ್ನು ಸರ್ಕಾರ ಕಡೆಗಣಿಸುವುದಿಲ್ಲ. ರಾಜ್ಯದ ರೈತರ ಹಿತ ಕಾಪಾಡಲು ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ ಎಂದರು.

ಅವರ ಈ ನಡೆಯಿಂದ ರಾಜ್ಯದ ರೈತರ ಬಗ್ಗೆ ಅವರಿಗೆ ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ರೈತರಿಗೆ 25 ಸಾವಿರ, 50 ಸಾವಿರ ಪರಿಹಾರ ನೀಡಿ ಎಂದು ಹೇಳುವವರು ಕೇಂದ್ರ ಸರ್ಕಾರದ ಬಳಿ ಮಾತನಾಡಿ ಅವರೂ ಪರಿಹಾರ ಕೊಡಿಸಬೇಕು ಎಂದು ಆಗ್ರಹಿಸಿದರು.

ಬರ ಪರಿಸ್ಥಿತಿಯ ಅಧ್ಯಯನ ಕುರಿತು ಅ. 3ರಂದು ಕೇಂದ್ರದ ತಂಡ ಬರುತ್ತಿದೆ. ಆ ಸಮಿತಿಗೆ ಅಗತ್ಯವಿರುವ ಎಲ್ಲ ಸಹಕಾರವನ್ನು ಕಾನೂನಿನ ಚೌಕಟ್ಟಿನಲ್ಲಿ ನಮ್ಮ ಅಧಿಕಾರಿಗಳು ನೀಡಲಿದ್ದಾರೆ ಎಂದು ತಿಳಿಸಿದರು.

ಕಸ್ತೂರಿರಂಗನ್ ವರದಿ ಹಾಗೂ ಬರ ಕುರಿತು ಚರ್ಚಿಸಲು ಸರ್ವಪಕ್ಷ ಸಭೆ ನಡೆಸುವ ಸಂಬಂಧ ಶೀಘ್ರದಲ್ಲೇ ದಿನಾಂಕ ನಿಗದಿಪಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಸಭೆಯ ದಿನಾಂಕ ನಿಗದಿಪಡಿಸುತ್ತೇನೆ. ಇದೇ ವೇಳೆ ಕೆಲವು ಕೇಂದ್ರ ಸಚಿವರನ್ನು ಭೇಟಿಯಾಗಲಿದ್ದು, ಎಸ್ ಐಆರ್ ಹಾಗೂ ಮುಖ್ಯ ಚುನಾವಣಾ ಆಯುಕ್ತರ ವಿಚಾರದ ಬಗ್ಗೆ ನಡೆಯುತ್ತಿರುವ ಸಿಡಬ್ಲ್ಯೂಸಿ ಸಭೆಯಲ್ಲಿ ಭಾಗವಹಿಸಲಾಗುವುದು. ಚರ್ಚೆ ನಡೆಸಬೇಕಿದೆ ಎಂದು ಹೇಳಿದರು.

### ಕಸ್ತೂರಿರಂಗನ್ ವರದಿ ವಿಚಾರವಾಗಿ ಕೇಂದ್ರ ಮಟ್ಟದಲ್ಲಿ ಚರ್ಚೆ



"ಕಸ್ತೂರಿರಂಗನ್ ವರದಿ ವಿಚಾರವಾಗಿಯೂ ಕೇಂದ್ರದ ಮಟ್ಟದಲ್ಲಿ ಚರ್ಚೆ ನಡೆಸಲಾಗುತ್ತದೆ. ಕಸ್ತೂರಿರಂಗನ್ ವಿಚಾರದಲ್ಲಿ ಕೇಂದ್ರ ಸಚಿವರ, ಪ್ರಧಾನಮಂತ್ರಿಯವರ ಭೇಟಿಗೆ ಸಮಯ ಕೇಳುತ್ತೇನೆ. ಸಮಯ ಪಡೆದು, ರಾಜ್ಯದ ಪರವಾಗಿ ಅಗತ್ಯವಿರುವ ಮನವಿಯನ್ನು ಸಲ್ಲಿಸುವ ಕೆಲಸ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

# ಯಾವೊಬ್ಬ ಮತದಾರನ ಹಕ್ಕು ಕಸಿದುಕೊಳ್ಳಲು ಬಿಡೊಲ್ಲ

### ವಿಜಯಪುರದಲ್ಲಿ ದಾಖಲೆ ಬಿಡುಗಡೆ ಮಾಡಿದ ಸಚಿವ ಡಾ. ಎಂ.ಬಿ.ಪಾಟೀಲ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೆಲವು ರಾಜಕೀಯ ವ್ಯಕ್ತಿಗಳು ಪ್ರೇರಣೆಯಿಂದ ಬಬಲೇಶ್ವರ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ 1607 ಮತದಾರರ ಬಗ್ಗೆ ಆಕ್ಷೇಪಣೆಯನ್ನು ಸಾಮೂಹಿಕವಾಗಿ ಸಲ್ಲಿಕೆ ಮಾಡಿ, ನಂತರ ಈ ಆಕ್ಷೇಪಣೆಗಳನ್ನು ಹಿಂದಕ್ಕೆ ಪಡೆದುಕೊಂಡಿದ್ದಾರೆ, ಈ ವೇಳೆ ಅವರೇ ಅವರೇ ಸಹಿ ಮಾಡಿಕೊಟ್ಟಿರುವ ಪತ್ರದಲ್ಲಿ ತಾವು ಭಾರತೀಯ ಜನತಾ ಪಕ್ಷದವರು ಎಂದು ಉಲ್ಲೇಖಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರ ನಗರ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿಯೂ ಕಳೆದ 22-9-2026 5 ಸಾವಿರಕ್ಕೂ ಹೆಚ್ಚು ಆಕ್ಷೇಪಣೆ ಅರ್ಜಿ, ದಿನಾಂಕ 23 ರಂದು ಪುನಃ 8 ಸಾವಿರ ರೂ. ಹೀಗೆ ಒಟ್ಟು 13 ಸಾವಿರ ಆಕ್ಷೇಪಣೆ ಸಲ್ಲಿಕೆ ಮಾಡಿ ನಂತರ ಹಿಂದಕ್ಕೆ ಪಡೆದುಕೊಳ್ಳಲಾಗಿದೆ, ನನ್ನ ಮಾಹಿತಿ ಪ್ರಕಾರ ಆಕ್ಷೇಪಣೆ ಸಲ್ಲಿಕೆ ಮಾಡಿರುವ ರಾಜಕುಮಾರ ಬಿರಾದಾರ ಹಾಗೂ ಸಚಿನ್ ವಿಜಯಪುರ ನಗರ ಮತಕ್ಷೇತ್ರದ ಶಾಸಕರ ಕಾರ್ಯಾಲಯದ ಸಿಬ್ಬಂದಿ ಎಂಬ ಮಾಹಿತಿ



ಇದೆ, ಇನ್ನುಳಿದಂತೆ ಆಕ್ಷೇಪಣೆ ಸಲ್ಲಿಕೆ ಮಾಡದವರಲ್ಲಿ ಪ್ರೇಮಾನಂದ ಬಿರಾದಾರ, ಚಂದ್ರಶೇಖರ ಕವಟಗಿ ಅವರು ಸಲ್ಲಿಕೆ ಮಾಡಿ ಈಗ ವಾಪಸ್ಸು ಪಡೆದುಕೊಂಡಿದ್ದಾರೆ.

ಈ ರೀತಿ ತಪ್ಪು ಮಾಹಿತಿ ನೀಡಿದವರ ಮೇಲೆ ಕ್ರಮ ಕೈಗೊಳ್ಳಲು ಕಾನೂನಾತ್ಮಕ ಹೋರಾಟದ ಬಗ್ಗೆ ಕಾನೂನು ತಜ್ಞರ ಜೊತೆ ಸಮಾಲೋಚನೆ ನಡೆಸುತ್ತಿರುವೆ ಎಂದರು.

ಇದು ಸರಿಯಾದ ಮಾರ್ಗವಲ್ಲ, ಯಾವೊಬ್ಬ ಅರ್ಹ ಮತದಾರರ ಹಕ್ಕನ್ನು ಕಸಿದುಕೊಳ್ಳುವುದು ಅತ್ಯಂತ ಹೀನವಾದ ಕೃತ್ಯ ಎಂದರು.

ಈ ವೇಳೆ ಮುಖಂಡರಾದ ರಾಜು ಆಲಗೂರ, ಹಮೀದ ಮುಶ್ರೀಫ್, ಅಬ್ದುಲ್ ರಜಾಕ್ ಹೊರ್ತಿ, ದಿನೇಶ ಹಳ್ಳಿ ಸೇರಿದಂತೆ ಹಲವರಿದ್ದರು.

### ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಯಾಗಲಿ

ಮುಖ್ಯ ಚುನಾವಣಾ ಆಯುಕ್ತರ ಮೇಲೆ ಗುರುತರ ಆಪಾದನೆ ಕೇಳಿಬಂದಿದ್ದು, ತಕ್ಷಣವೇ ಅವರನ್ನು ವಜಾಗೊಳಿಸಬೇಕು, ಅವರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ತನಿಖೆಗಾಗಿ ಹಾಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಎಂ.ಬಿ. ಪಾಟೀಲ ಒತ್ತಾಯಿಸಿದರು.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಚುನಾವಣಾ ಆಯೋಗವನ್ನು ದುರಪಯೋಗಪಡಿಸಿಕೊಂಡು ಅರ್ಹ ಮತದಾರರನ್ನು ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಜಾಪ್ರಭುತ್ವ ವಿರೋಧಿ ನಡೆ ಅನುಸರಿಸುತ್ತಿದೆ ಎಂದು ಆರೋಪಿಸಿದರು.

# ಕೇಂದ್ರ ಚುನಾವಣಾ ಆಯೋಗ ಮೋದಿ & ಅಮಿತ್ ಶಾ ಕೈಗೊಂಬೆ

### ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಬಂಧನಕ್ಕೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರತಿಭಟನೆ। ಸಚಿವ ಎಂ.ಬಿ.ಪಾಟೀಲ ಆರೋಪ




■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಬಂಧನಕ್ಕೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಗರದ ಅಂಬೇಡ್ಕರ್ ಮೈದಾನದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ನಡೆದ ಪ್ರತಿಭಟನಾ ಜಾಥಾದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರೊಂದಿಗೆ ಅನೇಕ ಮುಖಂಡರು, ಮಹಾನಗರ ಪಾಲಿಕೆ ಸದಸ್ಯರು ಹೆಜ್ಜೆಹಾಕಿದರು.

ಈ ವೇಳೆ ಮಾತನಾಡಿದ ಸಚಿವ ಎಂ.ಬಿ.ಪಾಟೀಲ ಅವರು, ಕೇಂದ್ರ ಚುನಾವಣಾ ಆಯೋಗವು ಮೋದಿ ಮತ್ತು ಅಮಿತ್ ಶಾ ಅವರ ಕೈಗೊಂಬೆಯಾಗಿದೆ. ಕೂಡಲೇ ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ, ಬಂಧಿಸಬೇಕು ಮತ್ತು ಈ ಪ್ರಕರಣದ ಕುರಿತು ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ನಮ್ಮ ನಾಯಕ ರಾಹುಲ್ ಗಾಂಧಿಯವರು 'ವೋಟ್ ಚೋರಿ' ಕುರಿತು ಹಲವು ಸಂದರ್ಭಗಳಲ್ಲಿ ಪ್ರಶ್ನೆಗಳನ್ನು ಎತ್ತಿ ಹೋರಾಟ ನಡೆಸಿದ್ದಾರೆ. ದೇಶಾದ್ಯಂತ ಕಾಂಗ್ರೆಸ್ ಈ ವಿಚಾರವನ್ನು ಮುಂದಿಟ್ಟುಕೊಂಡು ಪ್ರತಿಭಟನೆಗಳನ್ನು ನಡೆಸುತ್ತಿದೆ ಎಂದರು.

ವಿಜಯಪುರ ಜಿಲ್ಲೆಯಲ್ಲೂ ಮತ ಕಳವಿಗೆ ನಡೆದ ಪ್ರಯತ್ನವನ್ನು ಇಲ್ಲಿನ ಆಡಳಿತವು ತಡೆದು ಉತ್ತಮ ಕೆಲಸ ಮಾಡಿದೆ. ಅರ್ಜಿ ನೀಡಿದವರು ಈಗ ಹಿಂದೆ ಸರಿದಿದ್ದರೂ, ಇದೊಂದು ಗಂಭೀರ ಕೃತ್ಯವಾಗಿದೆ. ಈ ಕುರಿತು ಕಾನೂನು ಸಲಹೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಸಚಿವರು ಸಚಿವರು ನುಡಿದರು.

ಪ್ರತಿಭಟನೆಯಲ್ಲಿ ಡಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಮಾಜಿ ಶಾಸಕ ರಾಜು ಆಲಗೂರ, ಮುಖಂಡರಾದ ಅಬ್ದುಲ್ ಹಮೀದ್ ಮುಶ್ರೀಫ್, ಮಹಾನಗರ ಪಾಲಿಕೆ ಸದಸ್ಯರು ಸೇರಿದಂತೆ ಹಲವರು ಭಾಗವಹಿಸಿದ್ದರು.

# ನೇಮಕಾತಿ ಪರೀಕ್ಷೆ ಸುಸೂತ್ರ ನಿರ್ವಹಣೆಗೆ ಡಿಸಿ ಡಾ.ಆನಂದ ಕೆ ಸೂಚನೆ

### ಅ.2ರಂದು ಭೂ ಮಾಪಕರ, ಅ.4ರಂದು ಗ್ರಾಮ ಆಡಳಿತಾಧಿಕಾರಿ ನೇಮಕಾತಿ ಪರೀಕ್ಷೆಗಳು। ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪರೀಕ್ಷಾ ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ನಿರ್ದೇಶನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಭೂ ಮಾಪಕರು ಹಾಗೂ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಸುಸೂತ್ರವಾಗಿ, ಶಿಸ್ತುಬದ್ಧವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯವಿರುವ ಎಲ್ಲ ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅಧಿಕಾರಿಗಳಿಗೆ ಸೂಚಿಸಿದರು.


ಸೋಮವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ನಡೆದ ಪರೀಕ್ಷಾ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಕ್ಟೋಬರ್ 2ರಂದು ನಡೆಯಲಿರುವ ಭೂ ಮಾಪಕರ ಹುದ್ದೆಗಳ ನೇಮಕಾತಿ ಪರೀಕ್ಷೆಯು ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡು ಪತ್ರಿಕೆಗಳಲ್ಲಿ ನಡೆಯಲಿದ್ದು, ವಿಜಯಪುರ ನಗರದ 18 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 6,956 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಅಕ್ಟೋಬರ್ 4ರಂದು ನಡೆಯಲಿರುವ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಯು ವಿಜಯಪುರ ನಗರದ 49, ಕವಲಗಿ 2, ತಿಡಗುಂದಿ 1 ಹಾಗೂ ಬಬಲೇಶ್ವರದ 1 ಸೇರಿದಂತೆ ಒಟ್ಟು 53 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, 20,808 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪರೀಕ್ಷಾ ನಿಯಮಗಳ ಪಾಲನೆ ಕಡ್ಡಾಯವಾಗಿದೆ. ಈ ಬಾರಿ ನಮ್ಮ ಜಿಲ್ಲೆಗೆ ಒಬ್ಬರು ಮಾಸ್ಟರ್ ಟ್ರೇನರ್ ನೇಮಕವಾಗಿದ್ದು, ಅವರು ಪರೀಕ್ಷಾ ಸಿದ್ಧತೆ ಬಗ್ಗೆ ಈಗಾಗಲೇ ತಿಳಿಸಿಕೊಟ್ಟಿದ್ದಾರೆ ಎಂದರು.

ಇದೇ ಮೊದಲ ಬಾರಿಗೆ ಹಿರಿಯ ಅಧಿಕಾರಿಗಳನ್ನು ಫ್ಲೈಯಿಂಗ್ ಸ್ಕ್ವಾಡ್ ಆಗಿ ನೇಮಕ ಮಾಡಲಾಗಿದೆ. ಪ್ರತಿ ಕೇಂದ್ರದಲ್ಲೂ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಿದೆ. ಪರೀಕ್ಷೆಗೆ ಸಂಬಂಧಿಸಿದಂತೆ ತಮ್ಮ ಕೇಂದ್ರಕ್ಕೆ ಬಂದಿರುವ ಗೌಪ್ಯ ಸಾಮಗ್ರಿಗಳನ್ನು ಪರಿಶೀಲಿಸಬೇಕು. ಪರೀಕ್ಷೆ ಆರಂಭಕ್ಕೆ ಮುನ್ನವೇ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಯಾವುದೇ ಗೊಂದಲಗಳಾಗದಂತೆ ಸಂಪೂರ್ಣ ಜಾಗೃತೆಯಿಂದ ನೋಡಿಕೊಳ್ಳಬೇಕು. ತನ್ಮೂಲಕ ಪಾರದರ್ಶಕ ಪರೀಕ್ಷೆ ನಡೆಯುವ ನಿಟ್ಟಿನಲ್ಲಿ ನೀವೆಲ್ಲ ಎಚ್ಚರಿಕೆ ವಹಿಸಬೇಕು ಎಂದು ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಪರೀಕ್ಷಾ ವಿಶೇಷ ಕಾಯ್ದೆ ರೂಪಿಸಿದ್ದು ಇದೆ. ಪರೀಕ್ಷೆಗೆ ಸಂಬಂಧಿಸಿದಂತೆ ಯೋಜನಾ ಬದ್ಧವಾಗಿ ಹಾಗೂ ಆತ್ಮವಿಶ್ವಾಸದಿಂದ ಪರೀಕ್ಷೆ ನಡೆಸಬೇಕು ಎಂದು ಜಿಲ್ಲಾಧಿಕಾರಿ ಸೂಚನೆ ನೀಡಿದರು.



"ಈ ಪರೀಕ್ಷೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಿಮ್ಮ ತಯಾರಿ ಬಹಳ ಮುಖ್ಯ. ಪರೀಕ್ಷಾರ್ಥಿಗಳಿಗೆ ಗೊಂದಲವಾಗದಂತೆ ನೋಡಿಕೊಳ್ಳಿ. ಈ ಪರೀಕ್ಷೆಗಳು ಪ್ರತಿಯೊಬ್ಬ ಅಭ್ಯರ್ಥಿಯ ಜೀವನದ ಭವಿಷ್ಯ ರೂಪಿಸಿಕೊಳ್ಳುವ ಮಹತ್ವದ ಘಟ್ಟಗಳಾಗಿವೆ. ಹಾಗಾಗಿ ಯಾವುದೇ ಕಾರಣಕ್ಕೂ ಪರೀಕ್ಷಾ ಕರ್ತವ್ಯವನ್ನು ತುಂಬಾ ಎಚ್ಚರಿಕೆಯಿಂದ ನಿರ್ವಹಿಸಬೇಕು."

■ ಲಕ್ಷ್ಮಣ ನಿಂಬರಗಿ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ



"ಫ್ಲೈಯಿಂಗ್ ಸ್ಕ್ವಾಡ್ ಆಗಿ ಹಿರಿಯ ಅಧಿಕಾರಿಗಳನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಅವರಿಗೆ ನಾಲ್ಕು ಐದು ಕೇಂದ್ರ ಹಂಚಿಕೆ ಮಾಡಲಾಗಿದ್ದು, ಪರೀಕ್ಷೆ ಆರಂಭಕ್ಕೂ ಮೊದಲು ಅಲ್ಲಿರಬೇಕು. ಯಾವುದೇ ಗೊಂದಲಗಳಿದ್ದರೆ ತಕ್ಷಣಕ್ಕೆ ಗಮನಕ್ಕೆ ತರಬೇಕು. ಪರೀಕ್ಷಾ ಸೂಚನೆಗಳನ್ನು ಪಾಲಿಸಿ, ಚುನಾವಣಾ ರೀತಿಯಲ್ಲಿ ಜಿಲ್ಲಾಡಳಿತ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳಲಾಗಿದೆ."

■ ಡಾ. ಚೌದ್ರಾಮ
ಅಪರ ಜಿಲ್ಲಾಧಿಕಾರಿ

ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ ಅವರು ಮಾತನಾಡಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಎ. ಉಪ್ಪಾರ, ಖಜಾನೆ ಇಲಾಖೆಯ ಉಪ ನಿರ್ದೇಶಕರಾದ ಆನಂದ ಮುಚ್ಚಂಡಿ, ಡಿವೈ-ಎಸ್ಪಿ ನಾಗರಾಜ, ಮಾಸ್ಟರ್ ತರಬೇತಿದಾರರಾದ ಎಲ್.ಜಿ ಕುಂಬಾರ, ಜಗದೀಶ ಗುಲಗಂಜಿ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ಪರೀಕ್ಷೆ ಕೇಂದ್ರಗಳ ಉಪ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.



# ಎನ್ನೆಸ್ಸೆಸ್ ಸಂಸ್ಥಾಪನಾ ದಿನಾಚರಣೆ & 'ಏಕ್ ಮುಟ್ಟಿ ಅನಾಜ್' ಅಭಿಯಾನಕ್ಕೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್ ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ,ಎನ್ ಎಸ್ ಎಸ್ ಘಟಕ 1 ಮತ್ತು 2 ರ ಸಹಯೋಗದಲ್ಲಿ ಸೆ.24 ರಂದು ಹಮ್ಮಿಕೊಳ್ಳಲಾಗಿದ್ದ ಎನ್ ಎಸ್ ಎಸ್ ಸಂಸ್ಥಾಪನಾ ದಿನಾಚರಣೆ ಮತ್ತು 'ಏಕ್ ಮುಟ್ಟಿ ಅನಾಜ್' ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ವಿಜಯಪುರದ ಎನ್ ಎಸ್ ಎಸ್ ಜಿಲ್ಲಾ ಸಂಯೋಜಕ ಡಾ. ಗಂಗಾಧರ್ ಅಗಸರ ಮಾತನಾಡಿ, ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆಯ ತೊಡಗಿಸಿಕೊಂಡು ಸಮಾಜ ಸೇವೆಗೆ ಮುಂದಾಗಬೇಕು. ಸಾಮಾಜಿಕ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಈ ನಿಟ್ಟಿನಲ್ಲಿ 'ಏಕ್ ಮುಟ್ಟಿ ಅನಾಜ್' ಅಭಿಯಾನದಡಿಯಲ್ಲಿ ಆಹಾರ ದವಸ ಧಾನ್ಯಗಳನ್ನು ಸಂಗ್ರಹಿಸಿ ಅಗತ್ಯವಿರುವವರಿಗೆ ವಿತರಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಎ. ಟಿ ಶ್ರೀನಿವಾಸ್. ಐಕ್ಯೂಎಸಿ ಸಂಯೋಜಕ ಡಾ. ಪಿ. ಎಸ್. ಪಾಟೀಲ್ ಎನ್ ಎಸ್ ಘಟಕ 1 & 2 ರ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಮಿಲನ್ ರಾಥೋಡ್, ಡಾ. ತರನ್ನುಮ್ ಜಬೀನ್ ಖಾನ್ ಸೇರಿದಂತೆ ಹಲವರಿದ್ದರು.



# ಕುಸ್ತಿ ಅಖಾಡದಲ್ಲಿ ಚಿಕ್ಕಪಡಸಲಗಿ ಶಾಲೆ ವಿದ್ಯಾರ್ಥಿಗಳ ಸಾಧನೆ

■ ಉದಯರಶ್ಮಿ ದಿನಪತ್ರಿಕೆ

**ತಾಲೂಕು ಮಟ್ಟದ ಸ್ಪರ್ಧೆಯಲ್ಲಿ ಗಮನಾರ್ಹ ಪ್ರದರ್ಶನ । ಮೂವರು ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ**

ಜಮಖಂಡಿ: ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆ, ಚಿಕ್ಕಪಡಸಲಗಿ ಶಾಲೆಯ ವಿದ್ಯಾರ್ಥಿಗಳು ಜಮಖಂಡಿ ತಾಲೂಕು ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಮೂವರು ವಿದ್ಯಾರ್ಥಿಗಳು ಬಾಗಲಕೋಟೆ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ತಾಲೂಕು ಮಟ್ಟದಲ್ಲಿ ನಡೆದ ಕುಸ್ತಿ ಸ್ಪರ್ಧೆಯ 45 ಕೆ.ಜಿ. ಗ್ರಿಕೋ ರೋಮನ್ ವಿಭಾಗದಲ್ಲಿ ಪ್ರವೀಣ ಗದಿಗೆಪ್ಪ ಅಡಿಹುಡಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಅದೇ ರೀತಿ 45 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಶಿವಾನಂದ ಮಲ್ಲಪ್ಪ ಸೊನ್ನದ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. 65 ಕೆ.ಜಿ. ವಿಭಾಗದಲ್ಲಿ ಸಿದ್ಧಲಿಂಗ ಹಣಮಂತ ದಾನಗೌಡ ಸಹ ಉತ್ತಮ ಪ್ರದರ್ಶನ ನೀಡಿ ಜಿಲ್ಲಾ ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆದಿದ್ದಾನೆ.

ಈ ಸಾಧನೆಗೆ ಆಡಳಿತ ಮಂಡಳಿ ಹಾಗೂ ಶಿಕ್ಷಕ–ಸಿಬ್ಬಂದಿ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಶೋಷಿತರ ಧ್ವನಿಯಾಗಿ ಮಾನವ ಹಕ್ಕುಗಳ ರಕ್ಷಣೆಗೆ ಬದ್ಧ :ಮಕಾಂದಾರ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಅಂತರಾಷ್ಟ್ರೀಯ ಮಾನವ ಹಕ್ಕುಗಳ ನ್ಯಾಯಾಂಗ ಸುರಕ್ಷಾ ಪರಿಷದ್ ರಾಜ್ಯ ಘಟಕದ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿರುವ ಜನಪರ ಹೋರಾಟಗಾರ ಡಿ. ಎಂ. ಮಕಾಂದಾರ ಅವರಿಗೆ ಅಥಣಿಯ ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಹಾಗೂ ಸದಸ್ಯರು ಆತ್ಮೀಯವಾಗಿ ಗೌರವಿಸಿದರು.

ಸಮಾರಂಭದಲ್ಲಿ, ನೂತನ ರಾಜ್ಯಾಧ್ಯಕ್ಷರನ್ನು ಶಾಲು ಹೊದಿಸಿ, ಹೂಮಾಲೆ ಹಾಕಿ, ಸ್ಮರಣಿಕೆ ನೀಡಿ ಸನ್ಮಾನಿಸಿ ಅಭಿನಂದಿಸಿದರು

ಸನ್ಮಾನ ಹಾಗೂ ಅಭಿನಂದನೆಗಳನ್ನು ಸ್ವೀಕರಿಸಿ ಮಾತನಾಡಿದ ನೂತನ ರಾಜ್ಯಾಧ್ಯಕ್ಷ ಡಿ.ಎಂ. ಮಕಾಂದಾರ ಅವರು, ಮಾನವ ಹಕ್ಕುಗಳು ಬರೀ ಕಾನೂನಿನ ನಿಯಮಾವಳಿಗಳಷ್ಟೇ ಅಲ್ಲ ಅವು ಪ್ರತಿಯೊಬ್ಬ ಮಾನವನ ಗೌರವಯುತ, ಸ್ವತಂತ್ರ ಹಾಗೂ ಸಾರ್ವಭೌಮ ಬದುಕಿನ ಮೂಲ ಸೂತ್ರಗಳಾಗಿವೆ. ಜಾತಿ ಮತ ಧರ್ಮ ಭಾಷೆ ಲಿಂಗ ಹಾಗೂ ಸಾಮಾಜಿಕ–ಆರ್ಥಿಕ ಅಸಮಾನತೆಗಳನ್ನು ಮೀರಿ ಪ್ರತಿಯೊಬ್ಬ ನಾಗರಿಕನಿಗೂ ಸಂವಿಧಾನ ಒದಗಿಸಿರುವ ಮೂಲಭೂತ ಹಕ್ಕುಗಳು ತಲುಪಬೇಕಿದೆ. ಸಮಾಜದ ಕೊನೆಯ ವ್ಯಕ್ತಿಗೂ ನ್ಯಾಯ ಸಿಕ್ಕಾಗ ಮಾತ್ರ ಮಾನವ ಹಕ್ಕುಗಳ ನೈಜ ರಕ್ಷಣೆ ಸಾಧ್ಯ. ಈ ಮಹತ್ಕಾರ್ಯ ಕೇವಲ ಸರ್ಕಾರ ಅಥವಾ ಒಂದು ನಿರ್ದಿಷ್ಟ ಸಂಘಟನೆಯ ಹೊಣೆಗಾರಿಕೆಯಾಗದೆ, ಪ್ರತಿಯೊಬ್ಬ ಜಾಗೃತ ನಾಗರಿಕನ ಆದ್ಯ ಕರ್ತವ್ಯವಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು. ಪರಿಷದ್ ರಾಜ್ಯಾಧ್ಯಕ್ಷನಾಗಿ ಲಭಿಸಿರುವ ಈ ನಿಷ್ಠೆಯ ಪೀಠವನ್ನು ಅಸಹಾಯಕರ, ತುಳಿತಕ್ಕೊಳಗಾದವರ ಹಾಗೂ ಶೋಷಿತರ ಪರ ಧ್ವನಿಯಾಗಿ ಬಳಸುತ್ತೇನೆ. ನೊಂದವರಿಗೆ ಉಚಿತ ಕಾನೂನಾತ್ಮಕ ನೆರವು ನೀಡುವುದು, ಸಾಮಾಜಿಕ ಶಾಂತಿ, ಸಮರಸತೆ ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡಲು ನಿರಂತರ ಶ್ರಮಿಸುವುದು ನನ್ನ ಪ್ರಮುಖ ಆದ್ಯತೆಯಾಗಿದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖಂಡರು ಮಾತನಾಡಿ ಡಿ.ಎಂ. ಮಕಾಂದಾರ ಅವರ ದೀರ್ಘಕಾಲದ ಸಾಮಾಜಿಕ ಸೇವೆ, ಪ್ರಾಮಾಣಿಕತೆ ಹಾಗೂ ಅಸಹಾಯಕರ ಪರ ಇರುವ ನಿಲುವು ಶ್ಲಾಘನೀಯ. ಅವರು ಈ ಅತ್ಯುನ್ನತ ಹುದ್ದೆಗೆ ಆಯ್ಕೆಯಾಗಿರುವುದು ಅಥಣಿ ಭಾಗಕ್ಕೆ ಹಾಗೂ ಇಡೀ ರಾಜ್ಯಕ್ಕೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

## ವಿಜಯಪುರ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಕೊಲ್ಹಾರ ತಾಲೂಕು ಅಧ್ಯಕ್ಷ ಅರುಣ ಔರಸಂಗ ಅಭಿಮತ

# ಆರೋಗ್ಯ ರಕ್ಷಣೆಯಲ್ಲಿ ಫಾರ್ಮಸಿಸ್ಟ್‌ಗಳ ಪಾತ್ರ ಅನನ್ಯ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಫಾರ್ಮಸಿಸ್ಟ್‌ಗಳು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಆರೋಗ್ಯ ರಕ್ಷಣೆಗೆ ಬದ್ಧರಾಗಬೇಕು ಎಂದು ವಿಜಯಪುರ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಕೊಲ್ಹಾರ ತಾಲೂಕು ಅಧ್ಯಕ್ಷ ಅರುಣ ಔರಸಂಗ ಹೇಳಿದರು.

ಪಟ್ಟಣದ ದ್ಯಾಮವ್ವ ದೇವಿ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಬಿ.ಎಲ್.ಡಿ.ಇ ಸಂಸ್ಥೆಯ ಬಸವನ ಬಾಗೇವಾಡಿ ಔಷಧ ಮಹಾವಿದ್ಯಾಲಯ ಹಾಗೂ ವಿಜಯಪುರ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಕೊಲ್ಹಾರ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ವಿಶ್ವ ಫಾರ್ಮಸಿಸ್ಟ್ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಅಂಕಗಳಿಗೆ ಮಾತ್ರ ಸೀಮಿತವಾಗದೆ ಔಷಧ ವಿಜ್ಞಾನದ ಆಳವಾದ ಜ್ಞಾನ ಬೆಳೆಸಿಕೊಳ್ಳಬೇಕು. ಸಂಶೋಧನೆ, ಔಷಧ ತಯಾರಿಕೆ ಸೇರಿದಂತೆ ಫಾರ್ಮಸಿ ಕ್ಷೇತ್ರದಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಉತ್ತಮ ವೃತ್ತಿಪರರಾಗಿ ಹೊರಹೊಮ್ಮಬೇಕು ಎಂದರು.

ಚರಕ, ಸುಶ್ರುತರಿಂದ ಆರಂಭವಾದ ಭಾರತೀಯ ಔಷಧ ವಿಜ್ಞಾನದ ಪಯಣ ಇಂದು ಆಧುನಿಕ ತಂತ್ರಜ್ಞಾನ ಮತ್ತು ಸಂಶೋಧನೆಯೊಂದಿಗೆ ವಿಸ್ತರಿಸಿದೆ. ಕೊರೊನಾ ಮಹಾಮಾರಿಯ ಸಂದರ್ಭದಲ್ಲಿಯೂ ಫಾರ್ಮಸಿಸ್ಟ್‌ಗಳು ಮಹತ್ವದ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಿದರು.

ಬಿ.ಎಲ್.ಡಿ.ಇ ಸಂಸ್ಥೆಯ ಪ್ರೊಫೆಸರ್ ಚೇತನ್ ತೇಲಿ ಮಾತನಾಡಿ, ಫಾರ್ಮಸಿಸ್ಟ್‌ನ ಕರ್ತವ್ಯ ಔಷಧ ವಿತರಿಸುವುದಕ್ಕೆ ಸೀಮಿತವಲ್ಲ. ರೋಗಿಯೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಯನ್ನು ಅರಿತು ವೈದ್ಯರ ಸಲಹೆಯಂತೆ ಸರಿಯಾದ ಔಷಧಿ ಮತ್ತು ಪ್ರಮಾಣದ ಕುರಿತು ಮಾರ್ಗದರ್ಶನ ನೀಡಬೇಕು ಎಂದರು.

ಹಿರಿಯ ಫಾರ್ಮಸಿಸ್ಟ್ ಆದಾಮಸಾಬ್ ದಸ್ತಗೀರಸಾಬ್ ಜಮನಾ ಅವರು 1976ರಿಂದಲಿನ ತಮ್ಮ ವೃತ್ತಿ ಅನುಭವ ಹಂಚಿಕೊಂಡು, ರೋಗಿಗಳ ಹಿತವೇ ಫಾರ್ಮಸಿಸ್ಟ್‌ನ ಮೊದಲ ಆದ್ಯತೆಯಾಗಬೇಕು ಎಂದು ಸಲಹೆ ನೀಡಿದರು. ಬಾಳಪ್ಪ ಗವರೋಜಿ, ಡಾ.ಮಾರಾಪೂರ ಮಾತನಾಡಿದರು.

ಇಜಾಜ್ ಜಮನಾ, ಪ್ರಶಾಂತ ಸಂಗಳದ, ಡಾ. ಆರ್.ಬಿ. ಮಠ, ಡಾ. ಪೂಜಾ ಮಠ ಸೇರಿದಂತೆ ಔಷಧ ವ್ಯಾಪಾರಸ್ಥರು, ಫಾರ್ಮಸಿ ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು. ಕವಿತಾ ಅಜಯ ಮುದಕವಿ ಕಾರ್ಯಕ್ರಮ ನಿರ್ವಹಿಸಿದರು.

ಇದಕ್ಕೂ ಮುನ್ನ ಫಾರ್ಮಸಿ ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಔಷಧಿ ಹಾಗೂ ಆರೋಗ್ಯ ಜಾಗೃತಿ ಜಾಥಾ ನಡೆಸಿದರು.

## ಕುಪ್ಮಾ ವಿಜಯಪುರ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ । ಕುಪ್ಮಾ ರಾಜ್ಯ ಸಮಿತಿಯ ಉಪಾಧ್ಯಕ್ಷ ಸುಧಾಕರ ಶೆಟ್ಟಿ ಅಭಿಮತ

# ಸಂಘಟಿತ ಹೋರಾಟದಿಂದ ಎಂಥಹ ಸಮಸ್ಯೆಗೂ ಪರಿಹಾರ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಯಾವುದೇ ಒಂದು ಸಮಸ್ಯೆಯನ್ನು ಸರಿ ಮಾಡಬೇಕಾದರೆ. ಅಥವಾ ಯಾವುದೇ ಒಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದರೆ ಕೇವಲ ಒಬ್ಬರಿಂದ ಆಗುವ ಮಾತಲ್ಲ. ಬದಲಿಗೆ ಒಗ್ಗಟ್ಟಿನಿಂದ ಹೋರಾಡಿದಾಗ ಮಾತ್ರ ಅದನ್ನು ಸರಿಮ ಮಾಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಖಾಸಗಿ ಹಾಗೂ ಅನುದಾನ ರಹಿತ ಕಾಲೇಜುಗಳ ಸಮಸ್ಯೆಗಳನ್ನು ಕೇವಲ ಒಂದೋ ಎರಡೋ ಕಾಲೇಜಿನವರು ಸೇರಿ ಹೋರಾಡಿದರೆ ಅದಕ್ಕೆ ನ್ಯಾಯ ಸಿಗುವುದಿಲ್ಲ. ಆದ–'ರೆ ಒಂದು ಅಂಘಟನೆಯ ಮೂಲಕ ಹೋರಾಡಿದಾಗ ಅದಕ್ಕೆ ಬೆಲೆ ಬರುತ್ತದೆ ಎನ್ನುವ ಕಾರಣಕ್ಕಾಗಿ ಕರ್ನಾಟಕ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ ಪ್ರಾರಂಭಗೊಂಡಿತು ಎಂದು ಕುಪ್ಮಾ ರಾಜ್ಯ ಸಮಿತಿಯ ಉಪಾಧ್ಯಕ್ಷ ಹಾಗೂ ಕಾರ್ಕಳದ ಜ್ಞಾನಸುಧಾ ಸಂಸ್ಥೆಯ ಸಂಸ್ಥಾಪಕ ಸುಧಾಕರ ಶೆಟ್ಟಿ ಹೇಳಿದರು.

ನಗರದ ಶ್ರೀ ಶರಣಬಸವೇಶ್ವರ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ, ವಿಜಯಪುರ ಜಿಲ್ಲಾ ಘಟಕದ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಹಾಗೂ ಸದಸ್ಯರ ಪದಗ್ರಹಣ ಸಮಾರಂಭದ ಮುಖ್ಯ ಅತಿಥಿ ಸ್ಥಾನವಹಿಸಿಕೊಂಡು ಮಾತನಾಡಿದ ಅವರು; ಸರಳತೆಯ ಸಾಕಾರ ಮೂರ್ತಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯರು ನಡೆದಾಡಿದ ಭೂಮಿಯಲ್ಲಿ ಇಂದು ಈ ಸಂಘಟನೆ ತನ್ನ ಬೇರನ್ನು ಊರುತ್ತಿರುವುದು ಇಡೀ ಕುಪ್ಮಾ ಸಂಘಕ್ಕೆ ಒಂದು ಶಕ್ತಿ ತಂದಂತಾಗಿದೆ. ಪೂಜ್ಯರ ಆಶೀರ್ವಾದ ಪಡೆದುಕೊಂಡು ಈ ಸಂಘಟನೆಯ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯನ್ನು ತರುವುದರ ಮೂಲಕ ಸಮಸ್ಯೆಗಳೇನೇ ಇದ್ದರು ಪರಿಹಾರ ಕಂಡುಕೊಂಡು ಮಕ್ಕಳ ಹಾಗೂ ಪಾಲಕರ ಕನಸನ್ನು ನನಸು ಮಾಡುವುದಕ್ಕೆ ಕಂಕಣಬದ್ಧರಾಗೋಣ ಎಂದು ಹೇಳಿದರು. ಕುಪ್ಮಾ ಉಪಾಧ್ಯಕ್ಷ ಹಾಗೂ ಮಂಗಳೂರಿನ ಎಕ್ಸಲಂಟ್ ಕಾಲೇಜಿನ ಸಂಸ್ಥಾಪಕ ಯುವರಾಜ್ ಜೈನ ಮಾತನಾಡಿ; ಒಂದು ಸಂಘಟನೆಯಾಗಿ ಇಂದು ಕುಪ್ಮಾ ಅಸ್ತಿತ್ವಕ್ಕೆ ಬಂದಿದ್ದು ಎಲ್ಲರೂ ಕೈಜೋಡಿಸಿ ನಡೆದರೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಇದನ್ನು ಇನ್ನೂ ಉನ್ನತ ಮಟ್ಟಕ್ಕೆ ಬೆಳೆಸುವ ಕಾರ್ಯವನ್ನು ಮಾಡೋಣ ಎಂದು ಹೇಳಿದರು. ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣದ ಉಪ ನಿರ್ದೇಶಕ ಕೆ.ಎ.ಉಪ್ಪಾರ ಕಾರ್ಯಕ್ರಮ ಉದ್ಘಾಟಿಸಿದರು. ನಂದಿ ಶುಗರ್ಸ್ ನಿರ್ದೇಶಕ ಹಾಗೂ ಶ್ರೀ ಶರಣಬಸವೇಶ್ವರ ಸಮೂಹ ಶಿಕ್ಷಣ ಸಂಸ್ಥೆಗಳ ಸದಸ್ಯ ಸತ್ಯಜಿತ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣದ ಶಾಖಾಧಿಕಾರಿ ಪ್ರಕಾಶ ಗೊಂಗಡಿ, ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರ್‌ಮನ್ ಬಸವರಾಜ್ ಕೌಲಗಿ, ಜಗಜ್ಯೋತಿ ಬಸವೇಶ್ವರ ಸಂಸ್ಥೆಯ ಅಧ್ಯಕ್ಷ ಎಲ್.ಬಿ ಪಾಟೀಲ್ ಉಪಸ್ಥಿತರಿದ್ದರು.

ಶ್ರೀ ಶರಣಬಸವೇಶ್ವರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಜ್ವಲ್ ಪ್ರಸ್ತಾವಿಕ ಮಾತನಾಡಿದರು, ತುಂಗಳ ಪ.ಪೂ ಕಾಲೇಜಿನ ಪ್ರಾಂಶುಪಾಲ ಜಯತೀರ್ಥ ಕುಲಕರ್ಣಿ ವಂದಿಸಿದರು.

## ಕಗೌರವ ಅಧ್ಯಕ್ಷರಾಗಿ ಬಸವರಾಜ್ ಕೌಲಗಿ



**ಇದೇ ಸಂದರ್ಭದಲ್ಲಿ ಕುಪ್ಮಾ ವಿಜಯಪುರದ ಗೌರವ ಅಧ್ಯಕ್ಷರಾಗಿ ಬಸವರಾಜ್ ಕೌಲಗಿ, ಅಧ್ಯಕ್ಷರಾಗಿ ಎಲ್.ಬಿ ಪಾಟೀಲ್, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಎಸ್ ಪೂಜಾರಿ, ಹಾಗೂ ಸಿ.ಎಸ್.ಅವಟಿ ಮತ್ತು ರಾಜಶ್ರೀ ಜುಗತಿ, ಕಾರ್ಯದರ್ಶಿಯಾಗಿ ಹೇಮಲತಾ ಬೆನಕಟ್ಟಿ, ಜಂಟೀ ಕಾರ್ಯದರ್ಶಿಯಾಗಿ ಮೀನಾಕ್ಷಿ ಕರಡಿ, ಖಜಾಂಚಿಯಾಗಿ ಕೆ.ಎಂ ಗುನ್ನಾಪುರ ಹಾಗೂ ಸದಸ್ಯರಾಗಿ ಜೆ.ಎಸ್ ಬೋಳೇಗಾಂವ್, ದಿಲಿಪಕುಮಾರ ಪೂಜಾರಿ, ಬಸವರಾಜ ಸೊನ್ನದ, ಶಂಬುಲಿಂಗಯ್ಯ ಕರ್ಪೂರಮಠ, ಶಹನೂರ, ಶಾಜು ಜೋಸೇಫ್, ಕುಮಾರಗೌಡ ಹರ್ನಾಳ, ಸಂಪ್ರದಾ ಪಾಟೀಲ್ ಪದಗ್ರಹಣ ಮಾಡಿದರು.**

# ನಿಸ್ವಾರ್ಥ ಸೇವಾ ಮನೋಭಾವ ಬೆಳೆಸುವ ಎನ್ನೆಸ್ಸೆಸ್ :ಪ್ರೊ.ಶಿತೋಳೆ

■ ಉದಯರಶ್ಮಿ ದಿನಪತ್ರಿಕೆ




ಚಡಚಣ: ಯುವಜನರಲ್ಲಿ ನಿಸ್ವಾರ್ಥ ಸೇವಾ ಮನೋಭಾವ, ಸಾಮಾಜಿಕ ಹೊಣೆಗಾರಿಕೆ ಹಾಗೂ ದೇಶಪ್ರೇಮ ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಜಮಖಂಡಿಯ ಸರ್ಕಾರಿ ಪ್ರಥ–'ಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಆರ್.ಬಿ. ಶಿತೋಳೆ ಹೇಳಿದರು.

ಪಟ್ಟಣದ ಶ್ರೀ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಎನ್‌ಎಸ್‌ಎಸ್ ಘಟಕದ ವತಿಯಿಂದ ಸೆ.24ರಂದು ಆಯೋಜಿಸಿದ್ದ 'ರಾಷ್ಟ್ರೀಯ ಸೇವಾ ಯೋಜನೆ ದಿನ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮಹಾತ್ಮಾ ಗಾಂಧೀಜಿಯವರ ಜನ್ಮಶತಮಾನೋತ್ಸವದ ಅಂಗವಾಗಿ 1969ರ ಸೆ.24ರಂದು ಯುವಜನರಲ್ಲಿ ಸೇವಾ ಮನೋಭಾವ ಹಾಗೂ ದೇಶಪ್ರೇಮ ಬೆಳೆಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಎನ್‌ಎಸ್‌ಎಸ್ ಯೋಜನೆಯನ್ನು ಜಾರಿಗೆ ತಂದಿತು. 'ನನಗಾಗಿ ಅಲ್ಲ, ನಿನಗಾಗಿ' ಎಂಬ ಧ್ಯೇಯವಾಕ್ಯದೊಂದಿಗೆ ಆರಂಭವಾದ ಈ ಯೋಜನೆ ಇಂದಿಗೂ ಕೋಟ್ಯಂತರ ಯುವಕ–ಯುವತಿಯರಿಗೆ ಸಮಾಜಮುಖಿ ಬದುಕಿನ ಪಾಠ ಕಲಿಸುತ್ತಿದೆ ಎಂದರು.

ಐಕ್ಯೂಎಸಿ ಸಂಯೋಜಕ ಡಾ. ಎಸ್. ಎಸ್. ದೇಸಾಯಿ ಮಾತನಾಡಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ತರಗತಿಯ ಪಠ್ಯಪುಸ್ತಕಮತ್ತುಅಂಕಗಳಾಚೆಗೆಸಮಾಜದ ನೈಜ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಉತ್ತಮ ವೇದಿಕೆಯಾಗಿದೆ. ವಾರ್ಷಿಕ ಸೇವಾ ಶಿಬಿರಗಳ ಮೂಲಕ ಗ್ರಾಮಗಳಿಗೆ ತೆರಳುವ ವಿದ್ಯಾರ್ಥಿಗಳು ರಸ್ತೆ ದುರಸ್ತಿ, ಜಲಮೂಲಗಳ ಸ್ವಚ್ಛತೆ, ಆರೋಗ್ಯ ತಪಾಸಣೆ, ಸಾಕ್ಷರತಾ ಅಭಿಯಾನ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಸಹಾನುಭೂತಿ, ನಾಯಕತ್ವ ಹಾಗೂ ಸಂಘಟನಾ ಕೌಶಲ ಬೆಳೆಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಎಂ.ಕೆ. ಬಿರಾದಾರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಹಾಗೂ ಡಿಜಿಟಲ್ ಯುಗದಲ್ಲಿ ಯುವಜನತೆ ಸಮಾಜದಿಂದ ದೂರವಾಗುತ್ತಿರುವ ಆತಂಕವಿದೆ. ಇಂತಹ ಸಂದರ್ಭದಲ್ಲಿ ಎನ್‌ಎಸ್‌ಎಸ್‌ನಂತಹ ಸೇವಾ ಸಂಘಟನೆಗಳ ಅಗತ್ಯತೆ ಹೆಚ್ಚಾಗಿದೆ. ಪ್ರಕೃತಿ ವಿಕೋಪ, ಸಾಂಕ್ರಾಮಿಕ ರೋಗ, ರಕ್ತದಾನ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ಮುಂಚೂಣಿಯಲ್ಲಿ ನಿಂತು ಸೇವೆ ಸಲ್ಲಿಸುವ ಎನ್‌ಎಸ್‌ಎಸ್ ಯುವಕರು ಸಮಾಜದ ನೈಜ ಆಸ್ತಿಯಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಎನ್‌ಎಸ್–ಎಸ್ ವಿಭಾಗದ ಸಂಯೋಜಕ ಪ್ರೊ. ಎಂ.ಎ. ಜನವಾಡ, ಡಾ. ಯುವರಾಜ ಹಳೇಮನಿ, ಡಾ. ಎಸ್.ಬಿ. ರಾಠೋಡ, ಡಾ. ಆರ್.ಎಸ್. ಮಾವಿನಮರ, ಪ್ರೊ. ಮುರುಗೇಶ ಕೆ.ಎಂ., ಪ್ರೊ. ಬಸವರಾಜ ಯಳ್ಳೂರ, ಪ್ರೊ. ಸಂಜಯಕುಮಾರ ಅವಟಿ, ಪ್ರೊ. ಅಪ್ಪು ಜಾಧವ, ಪ್ರೊ. ಎ. ಎಸ್. ಪಾಟೀಲ, ಡಾ. ಪುರುಷೋತ್ತಮ ಕೆ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶೃತಿ ಬಿರಾದಾರ ನಿರೂಪಿಸಿದರು. ಸ್ನೇಹಾ ಸಂಗೊಳಿ ಸ್ವಾಗತಿಸಿದರು. ಸುಷ್ಮಿತಾ ನಂದಿನವರ ವಂದಿಸಿದರು.

# 'ಆರ್ಟ್ ಟೈಮ್ ಎಟ್ ಪಾರ್ಕ್' ಪ್ರಕೃತಿಯೊಂದಿಗೆ ಕಲಾವಿದರ ಸಂವಾದ

ಕಲಬುರಗಿ: ಕಲಬುರಗಿಯ ಸಮಾನಮನಸ್ಕರ ಗುಂಪಿನ ವತಿಯಿಂದ ನಗರದ ಸಾರ್ವಜನಿಕ ಉದ್ಯಾನವನದಲ್ಲಿ 'ಆರ್ಟ್ ಟೈಮ್ ಎಟ್ ಪಾರ್ಕ್' ಎಂಬ ವಿನೂತನ ರೇಖಾಚಿತ್ರ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಲಬುರಗಿ ನಗರದ ವಿವಿಧ ಬಡಾವಣೆಗಳ ಉದ್ಯಾನವನಗಳಲ್ಲಿ ಕಳೆದ ಏಳು ತಿಂಗಳಿಂದ ಈ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ. ಇದರ ಅಂಗವಾಗಿ ಇಂದು ಬೆಳಗ್ಗೆ 10 ಗಂಟೆಗೆ ಮಹಾನಗರ ಪಾಲಿಕೆಯ ಸುಂದರ ಉದ್ಯಾನವನದಲ್ಲಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ನಗರದ ಖ್ಯಾತ ಕಲಾವಿದ ಶ್ರೀ ವೀರೇಂದ್ರ ಶಹ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾದ ಡಾ. ಪರಶುರಾಮ್ ಪಿ. ಅವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯುವ ಕಲಾವಿದ ಶ್ರೀ ವಿಜಯಕುಮಾರ್ ಅವರು ವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ವೀರೇಂದ್ರ ಶಹ ಅವರು, "ಕಲಾವಿದನು ಅತ್ಯಂತ ಸಂವೇದನಾಶೀಲನಾಗಿರಬೇಕು. ನಿಸರ್ಗದೊಂದಿಗೆ ಸಂವಾದ ನಡೆಸಬೇಕು. ಪ್ರಕೃತಿಯ ಸೂಕ್ಷ್ಮತೆಯನ್ನು ಅವಲೋಕಿಸಿ, ಅದರ ನಿಗೂಢತೆಯನ್ನು ಅರಿಯುವ ಪ್ರಯತ್ನ ಮಾಡಬೇಕು. ಸುಂದರವಾದ ಪ್ರಕೃತಿ ಕಲಾವಿದನ ಸೃಜನಶೀಲತೆಗೆ ಸದಾ ಸ್ಫೂರ್ತಿ ನೀಡುತ್ತದೆ" ಎಂದು ಹೇಳಿದರು.

ಮುಖ್ಯ ಅತಿಥಿಗಳಾದ ಡಾ. ಪರಶುರಾಮ್ ಪಿ. ಅವರು ಮಾತನಾಡಿ, ಕಲಾವಿದರು ಉತ್ತಮ ಹಾಗೂ ಮಹತ್ವಪೂರ್ಣ ಕಲಾ ಪ್ರದರ್ಶನಗಳನ್ನು ವೀಕ್ಷಿಸುವ ಮೂಲಕ ತಮ್ಮ ಕಲಾ ಜ್ಞಾನವನ್ನು ವಿಸ್ತರಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಮಾರು ಹತ್ತು ಜನ ಕಲಾವಿದರು ಸ್ಥಳದಲ್ಲಿಯೇ ರೇಖಾಚಿತ್ರಗಳನ್ನು ರಚಿಸಿದರು. ಶ್ರೀ ಗಿರೀಶ್ ಕುಲಕರ್ಣಿ, ಅಭಿಜಿತ್ ಎಸ್.ಕೆ.,ವಿಜಯಕುಮಾರ್ ಔರಾದ್,ಸುರೇಶ್, ಸೂರ್ಯಕಾಂತ್ ನಂದೂರ್, ಹಿರಿಯ ಕಲಾವಿದರಾದ ಚಂದ್ರಹಾಸ್ ಜಾಲಿಹಾಳ್, ಅಂಬರಾಯ ಚಿನ್ನಮಳ್ಳಿ, ರಾಮಗಿರಿ ಪೊಲೀಸ್ ಪಾಟೀಲ್, ಕುಪೇಂದ್ರ ಕವಲ್ದಾರ್, ವಿಜಯ್ ಬಿರಾದಾರ್, ಕಾವ್ಯ ಸೇರಿದಂತೆ ಹಲವಾರು ಯುವ ಕಲಾವಿದರು ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಹಿರಿಯ ಕಲಾವಿದ ಶ್ರೀಕಾಂತ್ ಪೊದ್ದಾರ್ ಹಾಗೂ ಶ್ರೀ ವೀರೇಂದ್ರ ಶಹ ಅವರು ಭಾಗವಹಿಸಿದ ಕಲಾವಿದರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.



ಪ್ರಕೃತಿಯ ಮಡಿಲಿನಲ್ಲಿ ಕುಳಿತು ರೇಖಾಚಿತ್ರಗಳನ್ನು ರಚಿಸುವ ಮೂಲಕ ಕಲಾವಿದರು ನಿಸರ್ಗದ ಸೌಂದರ್ಯವನ್ನು ತಮ್ಮ ಕಲೆಯಲ್ಲಿ ಅಭಿವ್ಯಕ್ತಪಡಿಸಿದ ಈ ಕಾರ್ಯಕ್ರಮವು ಕಲಾ ಸಕ್ತರಿಗೆ ವಿಶೇಷ ಅನುಭವ ನೀಡಿತು.

# ಸಂಗೀತ ಕಲಾವಿದರು ಸಮೃದ್ಧ ಸಮಾಜದ ಆಸ್ತಿ :ಜ್ಯೋತಿ ಪಾಟೀಲ

ಕಲಬುರಗಿ: ಗ್ರಾಮೀಣ ಭಾಗದ ಸಂಗೀತ ನಮ್ಮ ಹಳ್ಳಿಯ ಧ್ವನಿ ಮಾತ್ರವಲ್ಲ, ಅದು ನಮ್ಮ ಮಣ್ಣಿನ ಆತ್ಮ. ಆ ಆತ್ಮವನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರದು ಎಂದು ಶ್ರೀ ರಾಮ ಕನ್ನಡ ಕಾನ್ವೆಂಟ್ ಶಾಲೆಯ ಮುಖ್ಯ ಗುರುಗಳಾದ ಜ್ಯೋತಿ ಪಾಟೀಲ ಹೇಳಿದರು.

ಕಲಬುರಗಿ ತಾಲ್ಲೂಕಿನ ಉಪಳಾಂವ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಪಕ್ಕದ ಆವರಣದಲ್ಲಿ ಶ್ರೀ ದೇವಿ ಸರಸ್ವತಿ ಕಲಾ ಬಳಗ ಸಂಘದ ವತಿಯಿಂದ ಹಮ್ಮಿಕೊಂಡಿರುವ ಮಧುರ ಗಾಯನ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಗ್ರಾಮೀಣ ಸಂಗೀತ ನಮ್ಮ ಮಣ್ಣಿನ ಧ್ವನಿ ಇದು ಕೇವಲ ಹಾಡಲ್ಲ, ನಮ್ಮ ಹಳ್ಳಿಯ ಜನರ ಜೀವನ, ಭಾವನೆ, ಸಂಸ್ಕೃತಿ ಮತ್ತು ಮಣ್ಣಿನ ಪರಿಮಳವನ್ನು ಸಾರುವ ಜೀವಂತ ಪರಂಪರೆ, ಸಂಗೀತ ಕಲಾವಿದರು ಸಮೃದ್ಧ ಸಮಾಜದ ಆಸ್ತಿ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಶಿಕ್ಷಕರಾದ ಕುಪೇಂದ್ರ ಹುಲಸುರೆ, ನ್ಯಾಯವಾದಿ ಹಣಮಂತರಾಯ ಅಟ್ಟೂರ, ಶ್ರೀ ರಾಮ ಕನ್ನಡ ಕಾನ್ವೆಂಟ್ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾದ ಗೌಡೇಶ ಬಿರೆದಾರ, ಬಸವರಾಜ ಧರಿ ಆಗಮಿಸಿದರು, ಸಂಘದ ಅಧ್ಯಕ್ಷರಾದ ಶರಣು ಕಟ್ಟಿಮನಿ ಸಾಗನೂರ ಅಧ್ಯಕ್ಷತೆ ವಹಿಸಿದರು. ಸಂಗೀತ ಕಲಾವಿದರಾದ ಗುರುಶಾಂತಯ್ಯ ಸ್ಥಾವರಮಾಠ, ಆನಂದಕುಮಾರ ಪೂಜಾರಿ, ಸೋಮಯ್ಯ ಸಿಂದನೂರ, ಬಸಯ್ಯ ಗುತ್ತೇದಾರ, ತೋಟಯ್ಯ ಅಬ್ಬೆತೂ ಮಕೂರ, ಶ್ರೀಶೈಲ ಯಳಸಂಗಿ, ವೀರಯ್ಯ ಸ್ವಾಮಿ ಮಾಡಿಯಾಳ ಸಂಗೀತ ಸೇವೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಅನೇಕ ಜನ ಭಾಗವಹಿಸಿದರು.



# ಅಂಬೇಡ್ಕರ್ ವಸತಿ ಶಾಲೆ ಮಕ್ಕಳು ವಿಭಾಗ ಮಟ್ಟಕ್ಕೆ ಆಯ್ಕೆ

ವಾಡಿ: ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಮಕ್ಕಳು ಸತತ ಮೂರನೇ ವರ್ಷವೂ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಸಾಧನೆ ಮೆರೆದಿದ್ದಾರೆ.

ಮಂಗಳವಾರ ನಗರದಲ್ಲಿ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ಪ್ರೌಢ ಶಾಲಾ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಾಡಿ ಡಿಬಿಆರ್ಎಸ್ ತಂಡವು ಎಲ್ಲಾ ಎದುರಾಳಿ ತಂಡಗಳನ್ನು ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ದೈಹಿಕ ಶಿಕ್ಷಕ ಶ್ರೀನಾಥ ಇರಗೊಂಡ ಅವರ ಕಠಿಣ ತರಬೇತಿ ಹಾಗೂ ಮಕ್ಕಳ ನಿರಂತರ ಪರಿಶ್ರಮದಿಂದ ಯಶಸ್ಸು ದಕ್ಕಿದೆ.

ಮೊದಲು ನಾಲವಾರ ಹೋಬಳಿ ಮಟ್ಟದಲ್ಲಿ ಪ್ರಥಮ, ನಂತರ ಚಿತ್ತಾಪುರ ತಾಲೂಕು ಮಟ್ಟದಲ್ಲಿ ಪ್ರಥಮ, ಈಗ ಜಿಲ್ಲಾ ಮಟ್ಟದಲ್ಲೂ ಪ್ರಥಮ ಸ್ಥಾನ ಪಡೆದರು,ವಾಲಿ ಬಾಲ್ ಕ್ರೀಡೆಯಲ್ಲಿ ಅಜೇಯ ತಂಡವಾಗಿ ಮುನ್ನುಗ್ಗುತ್ತಿರುವುದು ವಿಶೇಷ ಮೈದಾನದಲ್ಲಿ ವಿದ್ಯಾರ್ಥಿಗಳು ಚೆಂಡಿ ನಂತೆ ಪುಟಿಯುವ ಚುರುಕುತನ, ಸರ್ವಿಸ್, ಸ್ಮಾಶಿಂಗ್ ಹಾಗೂ ಬ್ಲಾಕಿಂಗ್ ನಲ್ಲಿ ತೋರಿದ ಕೌಶಲ್ಯ ನೆರೆದಿದ್ದ ಕ್ರೀಡಾಸಕ್ತರ ಮೆಚ್ಚುಗೆಗೆ ಪಾತ್ರವಾಯಿತು. ಫೈನಲ್ ಪಂದ್ಯದಲ್ಲಿ ಎದುರಾಳಿ ತಂಡವನ್ನು ನೇರ ಸೆಟ್ ಗಳಿಂದ ಮಣಿಸಿ ಪ್ರಶಸ್ತಿ ಪದಕಗಳನ್ನು ಅಪ್ಪಿಕೊಂಡರು.

ಈ ಗೆಲುವಿನೊಂದಿಗೆ ವಾಡಿ ಡಿಬಿ ಆರ್‌ಎಸ್ ತಂಡವು ಮುಂದಿನ ತಿಂಗಳು ನಡೆಯಲಿರುವ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ ಯಾಗಿದೆ. ಶಾಲೆಯ ಪ್ರಾಂಶುಪಾಲ ಉದಯ ಧರೆಣ್ಣವರ್, ಶಿಕ್ಷಕರು, ಪೋಷಕರು ವಿಜೇತ ತಂಡವನ್ನು ಅಭಿನಂದಿಸಿದ್ದಾರೆ.

## ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ್ ಕಟಕಧೋಂಡ ಅಭಿಮತ

# ಪ್ರವಾಸೋದ್ಯಮಕ್ಕೆ ಛಾಯಾಗ್ರಾಹಕರ ಕೊಡುಗೆ ಅಮೂಲ್ಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಎನ್.ಟಿ.ಪಿ.ಸಿ. ಕೆ.ಎಸ್.ಟಿ.ಡಿ.ಸಿ. ವಿಜಯಪುರ ಜಿಲ್ಲಾ ನೂತನ ಛಾಯಾಗ್ರಾಹಕರ ಸಂಘವು ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಅಂಗವಾಗಿ ಇಬ್ರಾಹಿಂರೋಜಾ ಆವರಣದಲ್ಲಿ ಜಿಲ್ಲಾ ಮಟ್ಟದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಪ್ರದರ್ಶನವನ್ನು ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ್ ಕಟಕಧೋಂಡ ಉದ್ಘಾಟಿಸಿ ಐತಿಹಾಸಿಕ ನಗರದ ಸ್ಮಾರಕಗಳನ್ನು ತಮ್ಮ ಕ್ಯಾಮರಾ ಕಣ್ಣಿನಿಂದ ಅತ್ಯುತ್ತಮವಾಗಿ ಸೆರೆಹಿಡಿದು ಕಲಾಸಕ್ತರಿಗೆ ಅದರ ಕಲಾಕತ್ಮಕತೆಯನ್ನು ತೋರಿಸುವುದರ ಮೂಲಕ ಪ್ರವಾಸೋದ್ಯಮಕ್ಕೆ ಛಾಯಾಗ್ರಾಹಕರ ಕೊಡುಗೆ ಅಮೂಲ್ಯವಾಗಿದೆ. ಇದೊಂದು ಸಂಗ್ರಹಯೋಗ್ಯ ಛಾಯಾಚಿತ್ರ ಪ್ರದರ್ಶನ, ಇಂತಹ ಕಲಾತ್ಮಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುವಂತಾಗಲಿ ಇದರಿಂದ ಪ್ರವಾಸೋದ್ಯಮಕ್ಕೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ ಎಂದರು.

ನಗರಾಬಿವೃದ್ಧಿ ಪ್ರಾದಿಕಾರದ ಮಾಜಿ ಅಧ್ಯಕ್ಷ ಹಾಗೂ ವಿಜಯಪುರ ಜಿಲ್ಲಾ ಹೊಟೇಲ ಅಸೋಸಿಯೆಶನ್ ಅಧ್ಯಕ್ಷ ಚಂದ್ರಕಾಂತ ಶೆಟ್ಟಿ ಮಾತನಾಡಿ, ಕಲಾವಿದರು ಮತ್ತು ಛಾಯಾಗ್ರಾಹಕರಿಗೆ ಪ್ರೋತ್ಸಾಹ ನೀಡಲು ನಮ್ಮ ಸಂಘದಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಅರವಿಂದ ಹೂಗಾರ, ಪ್ರವಾಸಿ ಅಧೀಕಾರಿ ಅನಿಲ ಬಣಜಿಗೇರ, ಹೋಟೆಲ ಉದ್ಯಮಿ ಶಾಂತೇಶ ಕಳಸಗೊಂಡ, ಎನ್.ಟಿ.ಪಿ.ಸಿ.ಯ ಕಾರ್ಯನಿರ್ವಾಹಕ ಕಾರ್ಪೋರೇಟ್ ಸಂಪರ್ಕಾಧಿಕಾರಿ ಶ್ರೀಮತಿ ಪುಜಾ ಪಾಂಡೆ, ಹಿರಿಯ ಕಲಾವಿದರಾದ ಪಿ. ಎಸ್. ಕಡೇಮನಿ, ವಿದ್ಯಾಧರ ಸಾಲಿ, ಬಿ. ಎಸ್. ಪಾಟೀಲ, ರಮೇಶ ಚವ್ಹಾಣ, ಪ್ರಶಾಂತ ಪಟ್ಟಣಶೆಟ್ಟಿ, ಮಲ್ಲಿಕಾರ್ಜುನ ಪಾರ್ವತಿ, ಸುಭಾಶ ಪವಾರ, ಉಪಸ್ಥಿತರಿದ್ದರು.

ಇದೆ ಸಂದರ್ಭದಲ್ಲಿ ಪ್ರಶಸ್ತಿ ವಿಜೇತರಾದ ಸಂತೋಷ ಹೂಣಸಗಿ ಪ್ರಥಮ, ಪವನಕುಮಾರ ಅಂಗಡಿ ದ್ವಿತಿಯ,



ಶಶಿಕುಮಾರ ಕುಂಬಾರ ತೃತೀಯ ಮತ್ತು ಗೌಡಪ್ಪಗೌಡ ಬಿರಾದಾರ ಹಾಗೂ ಎಮ್. ಉಕ್ಕಲಿ ಇವರಿಗೆ ಸಮಾಧಾನಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಸವರಾಜ ಸರ್ಜಾಪುರ, ಪ್ರಭಾಕರ ಅರಕೇರಿ, ವಿಠಲ ಗುಜ್ಜರ, ಸುರೇಶ್ ಗಲ್ಪಿ, ಪ್ರಮೋದ್ ಕಾಜಗಾರ, ಬಾಳು ಕಲಾಲ, ಜಿ. ಜೆ. ಗಲಗಲಿ, ಬಿ. ಎಲ್. ಕುಲಕರ್ಣಿ, ಗುರುಸಂಗಯ್ಯ ಮಠಪತಿ ಸಂಕೇತ್ ಪವಾರ, ಎಂ. ಪ್ರಭು, ಅಶೋಕ್ ಸಾರವಾಡ, ಸುರೇಶ್ ರಾಠೋಡ, ವೀರೇಶ್ ಶಿವಸಿಂಪಿ, ಸತೀಶ್ ಜಾಧವ, ಸತೀಶ ಕಲಾಲ, ಶಿವಕುಮಾರ ಗಡಶೆಟ್ಟಿ, ಗುರುರಾಜ ಪಲ್ಲೆದ, ರಾಜು ರಾಜಪೂತ, ಬಸವರಾಜ ಕುಂಬಾರ, ಪ್ರದರ್ಶನದಲ್ಲಿ ಛಾಯಾಚಿತ್ರದಲ್ಲಿ ಪ್ರದರ್ಶಿಸಿದರು.

# ಭಕ್ತಿ ಶಕ್ತಿ ಹೊಂದಿದಾಗ ಮಾತ್ರ ಮುಕ್ತಿ :ರಮೇಶ ಶಾಸ್ತ್ರಿ

■ ಉದಯರಶ್ಮಿ ದಿನಪತ್ರಿಕೆ

ಕೆಂಭಾವಿ: ಭವ ಬಂಧನದಿಂದ ಭಗವಂತನೆಡೆಗೆ ಕೊಂಡೊಯ್ಯುವ ಶಕ್ತಿ ಭಕ್ತಿಗೆ ಇದೆ, ಶಕ್ತಿ ಮತ್ತು ಭಕ್ತಿ ಹೊಂದಿದಾಗ ಮಾತ್ರ ಮುಕ್ತಿ ಹೊಂದಲು ಸಾಧ್ಯ ಎಂದು ರಮೇಶ ಶಾಸ್ತ್ರಿ ಯಾಳಗಿ ಹೇಳಿದರು.

ಪಟ್ಟಣದ ಶ್ರೀಗುರು ಕಾಂತೇಶ್ವರ ಜನಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ಹಿರೇಮಠ ಸಂಸ್ಥಾನದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಮತ್ತು ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬದುಕಲಿ ಬರುವ ಕಷ್ಟ ಕಾರ್ಪಣ್ಯಗಳನ್ನು ಮೆಟ್ಟಿ ನಿಲ್ಲಲು, ಸದ್ಗುರುವಿನ ಸನ್ನಿಧಿಯಲ್ಲಿ ಸೇರೋಣ ಎಂದವರು, ನರನನ್ನು ಹರನನ್ನಾಗಿಸುವ ಅದಮ್ಯ ಚೈತನ್ಯ ಸ್ವರೂಪವೇ ಸದ್ಗುರು ಎನ್ನುತ್ತಾ, ಮಣ್ಣಿನ ಕಾಯ ಮಣ್ಣಲ್ಲಿ ಮಣ್ಣಾಗುವ ಮೊದಲು ಮಹಾದೇವನ ನೆನೆಯುವ ಸದುದ್ದೇಶದಮಾಸಿಕಹುಣ್ಣಿಮೆಯ ಮಹಾನ್ ಕಾರ್ಯಕ್ಕೆ ಸದ್ಭಕ್ತರ ಕೈಜೋಡಿಸಬೇಕು ಎಂದರು.

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಷ ಬ್ರ ಶ್ರೀ ಚನ್ನಬಸವ ಶಿವಾಚಾರ್ಯರು ಅರ್ಥಪೂರ್ಣವಾದ ಕಾರ್ಯಕ್ರಮದಲ್ಲಿ ಅಸಂಖ್ಯಾತ ಭಕ್ತರು ಪಾಲ್ಗೊಂಡು



ಪ್ರಪಂಚದ ಜೊತೆ ಜೊತೆಗೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡರೆ ಜೀವನ ಸಾರ್ಥಕ ಎನಿಸುತ್ತದೆ ಎಂದು ಆಶಿಸಿದರು.

ಸೋಮನಾಥ ಯಾಳಗಿ ಹಾಗೂ ಯಮನೇಶ ಯಾಳಗಿ ಇವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಡಾ ಯಂಕನಗೌಡ ಎಸ್ ಪಾಟೀಲ್ ನಿರೂಪಿಸಿ ವಂದಿಸಿದರು.

ಸಾಹಿತಿ ನಿಂಗನಗೌಡ ದೇಸಾಯಿ, ನಿಜಗುಣಿ ವಿಶ್ವಕರ್ಮ, ಅಭಿಷೇಕ ಪಾಟೀಲ್, ಸೇರಿದಂತೆ ಮಹಿಳೆಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.

# ವಿಶ್ವಸಂಸ್ಥೆಯ ಹೈಡ್ರಾಮಾ: ಭಾರತಕ್ಕೆ ಸಿಂಹಾಸನವೋ? ಬರಿ ಭರವಸೆಯ ಬೂಟಾಟಿಕೆಯೋ?




**ಆಕಾಶ ರೋಡಗಿ**
**ಶಿವೂರ - ಅಫಜಲಪುರ**
**ಕಲಬುರ್ಗಿ ಜಿಲ್ಲೆ**

■ ಉದಯರಶ್ಮಿ ದಿನಪತ್ರಿಕೆ

**1945ರ ಕುರ್ಚಿಯಲ್ಲಿ 2026ರ ಜಗತ್ತು; ಭಾರತ ಬಾಗಿಲಲ್ಲೇ, ಕೀಲಿಯು ಐದು ಶಾಶ್ವತ ಸದಸ್ಯರ ಕೈಯಲ್ಲಿ!**

ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸೇರಿದಾಗಲೆಲ್ಲ ಭಾರತದ ಪಾಲಿಗೆ ಹಳೆಯ ಕಥೆಯೇ ಹೊಸ ಅಧ್ಯಾಯದೊಂದಿಗೆ ಮರಳುತ್ತದೆ. ವೇದಿಕೆ ಅದೇ, ಭಾಷಣಗಳು ಬದಲಾಗುತ್ತವೆ, ಬೆಂಬಲದ ಧ್ವನಿಗಳು ಹೆಚ್ಚುತ್ತವೆ; ಆದರೆ ಅಂತಿಮವಾಗಿ ಬಾಗಿಲು ತೆರೆಯುವುದೇ ಇಲ್ಲ. ವಿಷಯ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ.

ಭಾರತದ ಶಾಶ್ವತ ಸದಸ್ಯತ್ವಕ್ಕೆ ವಿವಿಧ ರಾಷ್ಟ್ರಗಳು ಬೆಂಬಲ ವ್ಯಕ್ತಪಡಿಸುತ್ತಿವೆ. ಯುರೋಪಿನ ವಿಸೆಗ್ರಾಡ್ ಸಮೂಹದ ರಾಷ್ಟ್ರಗಳ ಬೆಂಬಲವೂ ಭಾರತದ ರಾಜತಾಂತ್ರಿಕ ಪ್ರಯತ್ನಕ್ಕೆ ಮತ್ತೊಂದು ಧ್ವನಿಯಾಗಿದೆ. ಆದರೆ ಇಲ್ಲಿ ಒಂದು ಸರಳ ಪ್ರಶ್ನೆ ಎದುರಾಗುತ್ತದೆ ಬೆಂಬಲದ ಹೇಳಿಕೆಗಳು ಎಷ್ಟು? ವಿಶ್ವಸಂಸ್ಥೆಯ ನಿಯಮ ಬದಲಿಸಲು ಬೇಕಾದ ಒಮ್ಮತ ಎಷ್ಟು?

ಈ ಎರಡರ ನಡುವಿನ ಅಂತರವೇ ಭಾರತದ ಶಾಶ್ವತ ಸದಸ್ಯತ್ವದ ನಿಜವಾದ ಕಥೆ.

ವಿಶ್ವಸಂಸ್ಥೆ ಹುಟ್ಟಿದ 1945ರಲ್ಲಿ ಇದ್ದ ಜಾಗತಿಕ ಶಕ್ತಿಸಮೀಕರಣ ಇಂದಿನ ಜಗತ್ತಿನಂತಿಲ್ಲ. ಆಗಿದ್ದ ರಾಜಕೀಯ, ಆರ್ಥಿಕ ಮತ್ತು ಭದ್ರತಾ ಪರಿಸ್ಥಿತಿಯ ಆಧಾರದ ಮೇಲೆ ರೂಪುಗೊಂಡ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವದಲ್ಲಿ ಅಮೆರಿಕ, ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ಇಂದಿಗೂ ಕುಳಿತಿವೆ.

ಆದರೆ ಈ ಅವಧಿಯಲ್ಲಿ ಜಗತ್ತು ಬಹಳ ಬದಲಾಗಿದೆ.

ಏಷ್ಯಾದ ಶಕ್ತಿ ಬದಲಾಗಿದೆ. ಆಫ್ರಿಕಾದ ರಾಜಕೀಯ ಮಹತ್ವ ಹೆಚ್ಚಾಗಿದೆ. ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳ ಪಾತ್ರ ಬದಲಾಗಿದೆ. ಜಾಗತಿಕ ಆರ್ಥಿಕ ವ್ಯವಸ್ಥೆಯೇ ಹೊಸ ರೂಪ ಪಡೆದಿದೆ. ತಂತ್ರಜ್ಞಾನ ಮತ್ತು ಭದ್ರತೆಯ ಸ್ವರೂಪ ಬದಲಾಗಿದೆ.

ಆದರೆ ಭದ್ರತಾ ಮಂಡಳಿಯ ಶಾಶ್ವತ ಮೇಜು ಮಾತ್ರ ಬಹುತೇಕ ಅದೇ.

ಹೀಗಾಗಿ ಭಾರತದ ಪ್ರಶ್ನೆ ಕೇವಲ "ಭಾರತಕ್ಕೆ ಒಂದು ಕುರ್ಚಿ ಕೊಡಿ" ಎಂಬುದಲ್ಲ. ಅದರ ಹಿಂದೆ ಇನ್ನೂ ದೊಡ್ಡ ಪ್ರಶ್ನೆ ಇದೆ21ನೇ ಶತಮಾನದ ಜಗತ್ತನ್ನು 20ನೇ ಶತಮಾನದ ಅಧಿಕಾರ ಹಂಚಿಕೆಯ ನಿಯಮಗಳಿಂದಲೇಎಷ್ಟುಕಾಲನಡೆಸಬೇಕು?

ಭಾರತ ತನ್ನ ಬೇಡಿಕೆಗೆ ಹಲವು ಆಧಾರಗಳನ್ನು ಮುಂದಿಡುತ್ತಿದೆ. ದೊಡ್ಡ ಜನಸಂಖ್ಯೆ, ಆರ್ಥಿಕ ಸಾಮರ್ಥ್ಯ, ಅಣ್ವಸ್ತ್ರ ಸಾಮರ್ಥ್ಯ, ಬಾಹ್ಯಾಕಾಶ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ, ಜಾಗತಿಕ ದಕ್ಷಿಣದ ರಾಷ್ಟ್ರಗಳೊಂದಿಗೆ ವ್ಯಾಪಕ ಸಂಪರ್ಕ ಹಾಗೂ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ದೀರ್ಘಕಾಲದ ಕೊಡುಗೆಇವೆಲ್ಲವೂ ಭಾರತದ ವಾದದ ಭಾಗಗಳಾಗಿವೆ. ಭಾರತದ ವಿದೇಶಾಂಗ ಸಚಿವಾಲಯವೂ ಭದ್ರತಾ ಮಂಡಳಿಯ ಸುಧಾರಣೆ ಮತ್ತು ವಿಸ್ತರಣೆಯನ್ನು ತನ್ನ ಪ್ರಮುಖ ಆದ್ಯತೆಯಾಗಿ ಪ್ರತಿಪಾದಿಸುತ್ತಿದೆ.

ಇಲ್ಲಿ ಒಂದು ವೈರುಧ್ಯ ಕಣ್ಣಿಗೆ ಬೀಳುತ್ತದೆ.

ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಿಗೆ ಸೈನಿಕರನ್ನು ಕಳುಹಿಸುವ ಪ್ರಮುಖ ರಾಷ್ಟ್ರಗಳಲ್ಲಿ ಭಾರತವೂ ಒಂದು. ಆದರೆ ಜಾಗತಿಕ ಶಾಂತಿ ಮತ್ತು ಭದ್ರತೆಯ ಅಂತಿಮ ನಿರ್ಧಾರ ಕೈಗೊಳ್ಳುವ ಶಾಶ್ವತ ಮೇಜಿನಲ್ಲೇ ಭಾರತಕ್ಕೆ ಸ್ಥಾನವಿಲ್ಲ.

ಇದಕ್ಕಿಂತದೊಡ್ಡಪ್ರಶ್ನಾರ್ಥಕಚಿಹ್ನೆಬೇಕೇ?

ಆದರೆ ಭಾರತದ ಮುಂದೆ ಇರುವ ದೊಡ್ಡ ಬೀಗವೇ 'ವೀಟೋ' ಅಧಿಕಾರ.

ವಿಶ್ವಸಂಸ್ಥೆಯ ಸಂಸ್ಥಾಪನಾ ನಿಯಮಗಳನ್ನು ಬದಲಿಸುವುದು ಸಾಮಾನ್ಯ ಸಭೆಯಲ್ಲಿ ಮೂರನೇ ಎರಡರಷ್ಟು ಬೆಂಬಲ ಪಡೆಯುವುದರಲ್ಲೇ ಮುಗಿಯುವುದಿಲ್ಲ. ಪ್ರಸ್ತುತ ಶಾಶ್ವತ ಸದಸ್ಯ ರಾಷ್ಟ್ರಗಳ ಅನುಮೋದನೆಯೂ ಅಗತ್ಯ. ಅಂದರೆ ವಿಶ್ವದ ಬಹುಪಾಲು ರಾಷ್ಟ್ರಗಳು ಒಂದು ಬದಲಾವಣೆಯನ್ನು ಬೆಂಬಲಿಸಿದರೂ, ಅಂತಿಮ ಹಂತದಲ್ಲಿ ಐದು ಶಾಶ್ವತ ಸದಸ್ಯರ ಒಪ್ಪಿಗೆ ಅನಿವಾರ್ಯ.

ಇದೊಂದು ವಿಶಿಷ್ಟ ವ್ಯವಸ್ಥೆ


ಬಾಗಿಲುಬದಲಿಸಬೇಕಾದರೂಕೀಲಿಯು ಹಳೆಯ ಮನೆಯ ಮಾಲೀಕರ ಕೈಯಲ್ಲೇ!

ಇದೇ ಕಾರಣಕ್ಕೆ ಭಾರತದ ಪ್ರಯತ್ನದ ಸುತ್ತ ರಾಜತಾಂತ್ರಿಕ ಚರ್ಚೆ ಹಲವು ವರ್ಷಗಳಿಂದ ಮುಂದುವರಿಯುತ್ತಿದೆ.

ಭಾರತ, ಜಪಾನ್, ಜರ್ಮನಿ ಮತ್ತು ಬ್ರೆಜಿಲ್ಈ ನಾಲ್ಕು ರಾಷ್ಟ್ರಗಳ ಒಕ್ಕೂಟವೇ ಜಿ–4. ಈ ರಾಷ್ಟ್ರಗಳು ಭದ್ರತಾ ಮಂಡಳಿಯ ಶಾಶ್ವತಹಾಗೂಅಶಾಶ್ವತಎರಡೂವರ್ಗಗಳಲ್ಲಿ ವಿಸ್ತರಣೆ ಅಗತ್ಯವೆಂದು ಪ್ರತಿಪಾದಿಸುತ್ತಿವೆ. ಆದರೆ ನಾಲ್ಕೂ ರಾಷ್ಟ್ರಗಳ ಬೇಡಿಕೆಯ ಹಿಂದೆ ಪ್ರತ್ಯೇಕ ಪ್ರಾದೇಶಿಕ ರಾಜಕೀಯವೂ ಇದೆ.

ಭಾರತದ ವಿಚಾರದಲ್ಲಿ ಚೀನಾದ ನಿಲುವು ಒಂದು ಪ್ರಮುಖ ಅಂಶ. ಜರ್ಮನಿಯ ವಿಚಾರದಲ್ಲಿ ಯುರೋಪಿನ ರಾಜಕೀಯ ಲೆಕ್ಕಾಚಾರವಿದೆ. ಬ್ರೆಜಿಲ್‌ನ ವಿಚಾರದಲ್ಲಿ ಲ್ಯಾಟಿನ್ ಅಮೆರಿಕಾದ ಪ್ರಾದೇಶಿಕ ಪ್ರತಿನಿಧಿತ್ವದ ಪ್ರಶ್ನೆ ಇದೆ. ಜಪಾನ್‌ನ ವಿಚಾರದಲ್ಲಿಯೂ ಪೂರ್ವ ಏಷ್ಯಾದ ರಾಜಕೀಯ ಸಮೀಕರಣಗಳು ಪರಿಣಾಮ ಬೀರುತ್ತವೆ.

ಹೀಗಾಗಿ ಜಿ–4 ಒಂದೇ ಧ್ವನಿಯಲ್ಲಿ ಮಾತನಾಡಿದರೂ, ಪ್ರತಿಯೊಂದು ರಾಷ್ಟ್ರದ ಹಿಂದೆ ಪ್ರತ್ಯೇಕ ರಾಷ್ಟ್ರೀಯ




ಮತ್ತು ಪ್ರಾದೇಶಿಕ ಹಿತಾಸಕ್ತಿಗಳಿವೆ.

ಇನ್ನೊಂದೆಡೆ, ಹೊಸ ಶಾಶ್ವತ ಸದಸ್ಯರನ್ನು ಸೇರಿಸುವ ಬದಲು ದೀರ್ಘಾವಧಿಯ ಚುನಾಯಿತ ಸ್ಥಾನಗಳನ್ನು ವಿಸ್ತರಿಸುವ ಮಾದರಿಯನ್ನು ಬೆಂಬಲಿಸುವ ರಾಷ್ಟ್ರಗಳ ಸಮೂಹವೂ ಇದೆ. ಹೀಗಾಗಿ ಭದ್ರತಾ ಮಂಡಳಿ ಸುಧಾರಣೆಯ ಪ್ರಶ್ನೆಯನ್ನು ಕೇವಲ "ಭಾರತಕ್ಕೆ ಯಾರು ಬೆಂಬಲ, ಯಾರು ವಿರೋಧ?" ಎಂಬ ಎರಡು ಬಣ್ಣಗಳಲ್ಲಿ ನೋಡುವುದು ಸಾಧ್ಯವಿಲ್ಲ.

ಯಾರು ಸದಸ್ಯರಾಗಬೇಕು ಎಷ್ಟು ರಾಷ್ಟ್ರಗಳನ್ನು ಸೇರಿಸಬೇಕು? ಶಾಶ್ವತ ಸ್ಥಾನ ಇರಬೇಕೇ? ಹೊಸ ಸದಸ್ಯರಿಗೆ ವೀಟೋ ಅಧಿಕಾರ ಇರಬೇಕೇ? ಪ್ರಾದೇಶಿಕ ಪ್ರತಿನಿಧಿತ್ವವನ್ನು ಹೇಗೆ ಸಮತೋಲನಗೊಳಿಸಬೇಕು?ಪ್ರತಿಯೊಂದು ಪ್ರಶ್ನೆಯ ಹಿಂದೆಯೂ ಮತ್ತೊಂದು ದೇಶದ ಹಿತಾಸಕ್ತಿ ಇದೆ.

ಅದಕ್ಕಾಗಿಯೇ ಭದ್ರತಾ ಮಂಡಳಿ ಸುಧಾರಣೆ ಒಂದು ಬಾಗಿಲು ತೆರೆಯುವ ಕೆಲಸವಲ್ಲ; ಬೀಗದ ಮೇಲೊಂದು ಬೀಗ ಹಾಕಿರುವ ಕೊಠಡಿಯನ್ನು ತೆರೆಯುವ ಕೆಲಸದಂತಾಗಿದೆ.

ಇನ್ನೊಂದು ಸೂಕ್ಷ್ಮ ಪ್ರಶ್ನೆ ವೀಟೋ ಅಧಿಕಾರದ್ದು.

ಹೊಸ ಶಾಶ್ವತ ಸದಸ್ಯರಿಗೆ ಸ್ಥಾನ ಕೊಟ್ಟು, ವೀಟೋ ಅಧಿಕಾರ ಮಾತ್ರ ಕೊಡದಿದ್ದರೆ ಅದು ಎಷ್ಟು ಸಮಾನ ಅಧಿಕಾರ ಹಂಚಿಕೆ? ಭಾರತವು ವೀಟೋ ಅಧಿಕಾರ ಅಸ್ತಿತ್ವದಲ್ಲಿರುವವರೆಗೆ ಹೊಸ ಶಾಶ್ವತ ಸದಸ್ಯರಿಗೂ ಸಮಾನ ಹಕ್ಕು ಇರಬೇಕು ಎಂಬ ನಿಲುವನ್ನು ವ್ಯಕ್ತಪಡಿಸಿದೆ. ಜಿ–4 ಚರ್ಚೆಗಳಲ್ಲಿ ಹೊಸ ಶಾಶ್ವತ ಸದಸ್ಯರು ಆರಂಭಿಕ 15 ವರ್ಷಗಳ ಪರಿಶೀಲನಾ ಅವಧಿಯಲ್ಲಿ ವೀಟೋ ಬಳಸದಿರುವಂತಹ ರಾಜಿ ಮಾರ್ಗವೂ ಹಿಂದೆ ಪ್ರಸ್ತಾಪಗೊಂಡಿತ್ತು.

ಹೀಗಾಗಿ ಚರ್ಚೆ ಈಗ "ಭಾರತ ಬರಬೇಕೇ?" ಎನ್ನುವುದನ್ನು ಮೀರಿ "ಭಾರತ ಬಂದರೆ ಯಾವ ಅಧಿಕಾರದೊಂದಿಗೆ ಬರಬೇಕು?" ಎಂಬ ಹಂತಕ್ಕೂ ಬಂದಿದೆ.

ಇದರ ನಡುವೆ ಭಾರತದ ಮತ್ತೊಂದು ಬಲ ಅದರ ಜಾಗತಿಕ ವ್ಯಾಪ್ತಿ. ಆರ್ಥಿಕತೆ, ತಂತ್ರಜ್ಞಾನ, ಬಾಹ್ಯಾಕಾಶ, ಔಷಧೋದ್ಯಮ, ಸಮುದ್ರ ಭದ್ರತೆ, ಇಂಧನ, ಹವಾಮಾನ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಸಹಕಾರ ಹಲವು ಕ್ಷೇತ್ರಗಳಲ್ಲಿ ಭಾರತದ ಪ್ರಭಾವ ವಿಸ್ತರಿಸುತ್ತಿದೆ.

ಜಾಗತಿಕ ದಕ್ಷಿಣದ ಧ್ವನಿಯನ್ನು ಜಾಗತಿಕ ವೇದಿಕೆಯಲ್ಲಿ ಪ್ರತಿಧ್ವನಿಸುವ ಸಾಮರ್ಥ್ಯವೂ ಭಾರತದ ರಾಜತಾಂತ್ರಿಕ ಪ್ರಯತ್ನದ ಪ್ರಮುಖ ಭಾಗವಾಗಿದೆ.

ಆದರೆ ಇದೇ ಸಂದರ್ಭದಲ್ಲಿ ಒಂದು ವಿಷಯ ಮರೆಯಬಾರದು. ಭಾರತದ ಬೇಡಿಕೆ ಕೇವಲ ಭಾರತದ ಕುರ್ಚಿಯ ಬೇಡಿಕೆಯಾಗಿದ್ದರೆ ಅದರ ರಾಜತಾಂತ್ರಿಕ ವ್ಯಾಪ್ತಿ ಸೀಮಿತವಾಗಬಹುದು. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದಂತಹ ಪ್ರದೇಶಗಳಿಗೆ ಹೆಚ್ಚು ನ್ಯಾಯಯುತ ಪ್ರತಿನಿಧಿತ್ವ ಬೇಕು ಎಂಬ ದೊಡ್ಡ ಪ್ರಶ್ನೆಯೊಂದಿಗೆ ಅದು ಸಂಪರ್ಕ ಹೊಂದಿದಾಗ ಚರ್ಚೆಯ ವ್ಯಾಪ್ತಿ ಇನ್ನಷ್ಟು ವಿಸ್ತರಿಸುತ್ತದೆ.

ಆಫ್ರಿಕನ್ ರಾಷ್ಟ್ರಗಳೂ ಶಾಶ್ವತ ಪ್ರತಿನಿಧಿತ್ವಕ್ಕಾಗಿ ಬಹುಕಾಲದಿಂದ ಒತ್ತಾಯಿಸುತ್ತಿವೆ. ಹೀಗಾಗಿ ಭದ್ರತಾ ಮಂಡಳಿ ಸುಧಾರಣೆಯ ಪ್ರಶ್ನೆ ಭಾರತವೊಂದರ ಪ್ರಶ್ನೆಯಲ್ಲ. ಜಾಗತಿಕ ಆಡಳಿತ ವ್ಯವಸ್ಥೆ ಬದಲಾಗುತ್ತಿರುವ ಜಗತ್ತನ್ನು ಎಷ್ಟು ಪ್ರತಿಬಿಂಬಿಸುತ್ತಿದೆ ಎಂಬ ಪ್ರಶ್ನೆಯೂ ಹೌದು.

ಇದಕ್ಕಾಗಿಯೇ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಂದೆ ಒಂದು ದೊಡ್ಡ ಕನ್ನಡಿ ನಿಂತಿದೆ.

ಆ ಕನ್ನಡಿಯಲ್ಲಿ 1945ರ ಜಗತ್ತು ಕಾಣಿಸುತ್ತದೆಯೇ, 2026ರ ಜಗತ್ತು ಕಾಣಿಸುತ್ತದೆಯೇ?

ಭಾರತಕ್ಕೆ ದೊರೆಯುವ ಪ್ರತಿಯೊಂದು ಬೆಂಬಲವೂ ರಾಜತಾಂತ್ರಿಕವಾಗಿ ಮಹತ್ವದ್ದೇ. ಆದರೆಬೆಂಬಲದಹೇಳಿಕೆಮತ್ತುವಿಶ್ವಸಂಸ್ಥೆಯ ಸಂಸ್ಥಾಪನಾ ನಿಯಮ ಬದಲಿಸುವ ನಡುವಿನ ಅಂತರವನ್ನು ಮರೆಯಬಾರದು.

ವಿಸೆಗ್ರಾಡ್ ರಾಷ್ಟ್ರಗಳ ಬೆಂಬಲ ಇರಬಹುದು. ಜಿ–4 ಒಕ್ಕೂಟ ಇರಬಹುದು. ಹಲವು ರಾಷ್ಟ್ರಗಳ ಸುಧಾರಣಾ ಬೇಡಿಕೆ ಇರಬಹುದು. ಆದರೂ ಅಂತಿಮ ಒಪ್ಪಂದಕ್ಕೆ ಇನ್ನೂ ದೀರ್ಘ ರಾಜತಾಂತ್ರಿಕ ಮಾತುಕತೆ ಅಗತ್ಯ.

ಹೀಗಾಗಿ ನ್ಯೂಯಾರ್ಕ್‌ನಲ್ಲಿ ಕೇಳಿಬರುವ ಪ್ರತಿಯೊಂದು ಬೆಂಬಲದ ಧ್ವನಿಯನ್ನು "ಭಾರತದ ಸಿಂಹಾಸನ ಸಿದ್ಧವಾಗಿದೆ" ಎಂದು ಓದುವುದು ಅತಿರೇಕ.

ಅದೇಸಮಯದಲ್ಲಿಅದನ್ನು"ಬರೀಚಹಾ ಕೂಟ" ಎಂದು ತಳ್ಳಿಹಾಕುವುದೂ ಸರಿಯಲ್ಲ.

ಪ್ರತಿ ಬೆಂಬಲವೂ ಒಂದು ಇಟ್ಟಿಗೆ

ಆದರೆ ಅರಮನೆ ಕಟ್ಟಲು ಇನ್ನೂ ಗೋಡೆಗಳು ಬೇಕು. ಬಾಗಿಲು ಬೇಕು. ಮತ್ತು ಕೊನೆಗೆ ಕೀಲಿಯೂ ಬೇಕು!

ಭಾರತದ ಮುಂದಿರುವ ದಾರಿ ಹೀಗಾಗಿ ಕೇವಲ ವಿಶ್ವಸಂಸ್ಥೆಯ ಬಾಗಿಲಿನತ್ತ ನೋಡುವುದಲ್ಲ. ತನ್ನ ಆರ್ಥಿಕ, ತಾಂತ್ರಿಕ, ರಕ್ಷಣಾ ಮತ್ತು ರಾಜತಾಂತ್ರಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ಜಾಗತಿಕ ದಕ್ಷಿಣದ ರಾಷ್ಟ್ರಗಳೊಂದಿಗೆ ಸಹಕಾರವನ್ನು ವಿಸ್ತರಿಸಿ, ಭದ್ರತಾ ಮಂಡಳಿ ಸುಧಾರಣೆಗೆ ಹೆಚ್ಚಿನ ಅಂತರರಾಷ್ಟ್ರೀಯ ಬೆಂಬಲ ಕಟ್ಟಿಕೊಳ್ಳುವ ಪ್ರಯತ್ನವೂ ಅದರ ಭಾಗವಾಗಿದೆ.

ಏಕೆಂದರೆ ಭದ್ರತಾ ಮಂಡಳಿಯ ಕುರ್ಚಿ ದೊರೆಯುತ್ತದೆಯೇ ಎಂಬ ಪ್ರಶ್ನೆಗೆ ಇಂದು ಖಚಿತ ದಿನಾಂಕವಿಲ್ಲ.

ಆದರೆ ಒಂದು ಸಂಗತಿ ಸ್ಪಷ್ಟ ಭದ್ರತಾ ಮಂಡಳಿಯ ಇಂದಿನ ರಚನೆ ಮತ್ತು ಬದಲಾಗುತ್ತಿರುವ ಜಾಗತಿಕ ಶಕ್ತಿಸಮೀಕರಣದ ನಡುವಿನ ಅಂತರದ ಕುರಿತು ಚರ್ಚೆ ಮುಂದುವರಿಯುತ್ತಿದೆ.

ಹೀಗಾಗಿ ಭಾರತದ ಪ್ರಶ್ನೆಯನ್ನು ಒಂದೇ ಸಾಲಿನಲ್ಲಿ ಹೀಗೆ ಕೇಳಬಹುದು:

"ಜಗತ್ತು ಬದಲಾಗಿರುವಾಗ, ವಿಶ್ವಸಂಸ್ಥೆಯ ಅಧಿಕಾರದ ಮೇಜು ಮಾತ್ರ ಏಕೆ ಬದಲಾಗಬಾರದು?"

ಉತ್ತರ ಇನ್ನೂ ನ್ಯೂಯಾರ್ಕ್‌ನ ಸಭಾಂಗಣಗಳಲ್ಲೇ ಹುಡುಕಲಾಗುತ್ತಿದೆ.

ಭಾರತದ ಪರವಾಗಿ ಕೇಳಿಬರುವ ಧ್ವನಿಗಳು ಹೆಚ್ಚುತ್ತಿವೆ. ಆದರೆ ಆ ಧ್ವನಿಗಳು ಸಂಸ್ಥಾಪನಾ ನಿಯಮ ಬದಲಿಸುವಷ್ಟು ಒಮ್ಮತವಾಗಿ ರೂಪುಗೊಳ್ಳುತ್ತವೆಯೇ ಎಂಬುದು ಇನ್ನೂ ತೆರೆದ ಪ್ರಶ್ನೆ.

ಅಷ್ಟರವರೆಗೆ ವಿಶ್ವಸಂಸ್ಥೆಯ ಹಳೆಯ ಬಾಗಿಲಿನ ಮೇಲೆ ಐದು ಬೀಗಗಳು ನೇತಾಡುತ್ತಲೇ ಇರುತ್ತವೆ.

ಕೀಲಿಗಳುಐದುಶಾಶ್ವತಸದಸ್ಯರಕೈಯಲ್ಲಿ.

ಬಾಗಿಲಿನ ಹೊರಗೆ ಭಾರತ. ಒಳಗೆ 1945ರ ಕುರ್ಚಿ. ಹೊರಗೆ 2026ರ ಜಗತ್ತು.

ಇದೇ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸುಧಾರಣೆಯ ದೊಡ್ಡ ವ್ಯಂಗ್ಯ.







# ಲಕ್ಷ್ಮೀಪುತ್ರ ಕಿರನಳ್ಳಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಶಾಲೆಯ ಮುಖ್ಯ ಶಿಕ್ಷಕ ರವರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಭಾನುವಾರ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಲಕ್ಷ್ಮೀಪುತ್ರ ಕಿರನಳ್ಳಿ ರವರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಂಘಟನಾತ್ಮಕ ಸೇವೆಯನ್ನು ಪರಿಗಣಿಸಿ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

ಪ್ರಶಸ್ತಿಯನ್ನು ಮಾಜಿ ಸಭಾಪತಿಗಳು ಹಾಗೂ ಮಾಜಿ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿ, ಸಚಿವ ರುದ್ರಪ್ಪ ಲಮಾಣಿ, ಶಾಸಕ ಹಣಮಂತ ನಿರಾಣಿ, ಚಂದ್ರಶೇಖರ ನುಗ್ಲಿ, ಜಿ.ಹನುಮಂತಪ್ಪ, ರಾಜಾಧ್ಯಕ್ಷ ಶಿವಾನಂದ ಹಿರೇಕುರುಬರ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಮ್.ಕೆ.ರಾಜು, ಜಿಲ್ಲಾಧ್ಯಕ್ಷ ಗಿರೀಶ ಬಿರಾದಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಗುಳೇದಗುಡ್ಡ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಹೊಸೂರ ಮುಂತಾದವರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಲಭಿಸಿದಕ್ಕೆ ಸಂಸ್ಥೆಯ ಅಧ್ಯಕ್ಷ ಎಸ್. ಆಯ್.ಜೋಗೂರ,ಕಾರ್ಯದರ್ಶಿ ಪ್ರಶಾಂತ ಬಡದಾಳ ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕವೃಂದದವರು ಹರ್ಷ ವ್ಯಕ್ತ ಪಡಿಸಿದರು.

# ಪ್ರಾಮಾಣಿಕ ಶ್ರಮಿಕರಿಗೆ ಸಿದ್ಧಸಿರಿ ಕಾಮಧೇನು ಕಲ್ಪವೃಕ್ಷ

## ಸಿದ್ಧಸಿರಿ ಮಲ್ಟಿ-ಸ್ಟೇಟ್ ಮಲ್ಟಿ-ಪರ್ಪಸ್ ಕೋ.ಆಪರೇಟಿವ್ ಸೊಸೈಟಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಭಿಮತ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಿದ್ಧಸಿರಿ ಮಲ್ಟಿ–ಸ್ಟೇಟ್ ಮಲ್ಟಿ–ಪರ್ಪಸ್ ಕೋ.ಆಪರೇಟಿವ್ ಸೊಸೈಟಿಯು ರಾಜ್ಯದಲ್ಲಿಯೇ ನಂಬರ್ 1 ಸ್ಥಾನದಲ್ಲಿದೆ. ಜನ ನಮ್ಮ ಸಂಸ್ಥೆ ಮೇಲಿಟ್ಟಿರುವ ಅಪಾರ ನಂಬಿಕೆಯಿಂದಲೇ ಇಂದು ಠೇವಣಿ ರೂ.6,140 ಕೋಟಿ ತಲುಪಿದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳರು ಹೇಳಿದರು.

ನಗರದ ಕಿತ್ತೂರು ರಾಣಿ ಚೆನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಿದ್ಧಸಿರಿ ಮಲ್ಟಿ–ಸ್ಟೇಟ್ ಮಲ್ಟಿ–ಪರ್ಪಸ್ ಕೋ. ಆಪರೇಟಿವ್ ಸೊಸೈಟಿ 20ನೇ ವಾರ್ಷಿಕ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಿದ್ಧಸಿರಿ ಒಂದು ಕುಟುಂಬವಿದ್ದಂತೆ, ಪ್ರಾಮಾಣಿಕ ಶ್ರಮಿಕರಿಗೆ ಕಾಮಧೇನು ಕಲ್ಪವೃಕ್ಷವಾಗಿದೆ. ಜನಸೇವೆಯೇ ನಮ್ಮ ಮುಖ್ಯ ಉದ್ದೇಶ. ಯಾರ ಕುಟುಂಬಗಳನ್ನು ಮುಗಿಸುವ ಕೆಟ್ಟ ಬುದ್ಧಿ ನಮ್ಮಗಳಿಗಿಲ್ಲ. ಅಮಾಯಕರಿಗೆ ಮೋಸ ಮಾಡಿ ಏನು ಮಾಡೋದು? ಎಂದರು.

ನಮ್ಮ ಸಂಸ್ಥೆ ಸಮುದ್ರದಂತೆ ಬೆಳೆದಿದೆ. ಯಾರು ಏನೇ ಮಾಡಿದರೂ ಏನೂ ಮಾಡಲು ಆಗುವುದಿಲ್ಲ. ಅಪಪ್ರಚಾರಕ್ಕೆ ಜನರೇ ಉತ್ತರ ನೀಡುತ್ತಾರೆ. ವಂಚನೆ, ಮೋಸ ಮಾಡಿದವ–ರಿಗೆ ಶಿಕ್ಷೆ ಕೂಡ ನಿಶ್ಚಿತ. 30 ವರ್ಷಗಳಿಂದ ಅಧ್ಯಕ್ಷನಾಗಿರುವ ಸಿದ್ದೇಶ್ವರ ಸಂಸ್ಥೆಯಲ್ಲಿಯೂ ಒಂದೇ ಒಂದು ಹಗರಣ ತೋರಿಸುವ ತಾಕತ್ತು ಯಾರಿಗೂ ಇಲ್ಲ. ಕೇವಲ ರೂ.1 ಕೋಟಿ ಇದ್ದ ಆಸ್ತಿ, ಇಂದು 465 ಕೋಟಿಯಾಗಿದೆ ಎಂದರು.

ಸೊಸೈಟಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ನಿರ್ದೇಶಕರಾದ ಬಸಯ್ಯ ಹಿರೇಮಠ, ಸಂಗನಬಸಪ್ಪ ಸಜ್ಜನ, ಶಿವಾನಂದ ಅಣೆಪ್ಪನವರ, ಸಾಯಿಬಾಬಾ ಸಿಂದಗೇರಿ, ಜಗದೀಶ ಕ್ಷತ್ರಿ, ವಿಜಯಕುಮಾರ್ ಚವ್ಹಾಣ, ಶೈಲಜಾ ಪಾಟೀಲ, ಸೀಮಾ ಕೋರೆ, ಸೋಮಶೇಖರ ಬಂಡಿ, ಬಸನಗೌಡ ಪಾಟೀಲ ನಾಗರಾಳಹುಲಿ, ಗಣಪತಿ ಜಾಧವ, ವೈಭವ ಡಾಂಗೆ, ಆದರ್ಶ ಪಾಟೀಲ, ನಾಗರಾಜ ಮುಳವಾಡ, ಅಬೋಲಿ ಪಾಟೀಲ, ಆಕಾಶ ಗುತ್ತೇದಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೊತಿಬಾ ಖಂಡಾಗಳೆ ಸೇರಿದಂತೆ ಮತ್ತಿತರರು ಇದ್ದರು.

### ರೂ.36.99 ಕೋಟಿ ನಿವ್ವಳ ಲಾಭ

ಸಿದ್ಧಸಿರಿ ಮಲ್ಟಿ–ಸ್ಟೇಟ್ ಮಲ್ಟಿ–ಪರ್ಪಸ್ ಕೋ. ಆಪರೇಟಿವ್ ಸೊಸೈಟಿ ಅಧ್ಯಕ್ಷ ರಾಮನಗೌಡ ಪಾಟೀಲ ಯತ್ನಾಳ ಮಾತನಾಡಿ, ಆಡಳಿತ ಮಂಡಳಿ, ಗ್ರಾಹಕರ ಸಹಕಾರ, ವಿಶ್ವಾಸ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಶ್ರಮದಿಂದ ಸಿದ್ಧಸಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ 2025–26ನೇ ಸಾಲಿನಲ್ಲಿ ರೂ.36.99 ಕೋಟಿ ನಿವ್ವಳ ಲಾಭ ಗಳಿಸಿದ್ದು, ಈ ವರ್ಷ ಶೇ 15 ರಷ್ಟು ಡಿವಿಡೆಂಡ್ ನೀಡಲಾಗುವುದು ಎಂದರು.

ಪ್ರಸ್ತುತ ಸೊಸೈಟಿ ದಾಖಲೆಯ ರೂ. 6140 ಕೋಟಿ ಠೇವಣಿಯಿದ್ದು, 2026 ಮಾರ್ಚ್ ಅಂತ್ಯಕ್ಕೆ 85.37 ಕೋಟಿ ಶೇರು ಬಂಡವಾಳ, 5,638.99 ಕೋಟಿ ದುಡಿಯುವ ಬಂಡವಾಳ, 5,201.92 ಕೋಟಿ ಠೇವಣಿಗಳು, 3905.56 ಕೋಟಿ ಸಾಲ ಮುಂಗಡ, 113.78 ಕೋಟಿ ಕಾಯ್ದಿಟ್ಟ ನಿಧಿ, 59.11 ಕೋಟಿ ನಿಶ್ಚಿತ ಆಸ್ತಿಗಳು, ರೂ.432 ಕೋಟಿ ಹೂಡಿಕೆ ಹೊಂದಿದೆ ಎಂದು ತಿಳಿಸಿದರು.



# ಸಹಬಾಳ್ವೆಯಿಂದ ಬದುಕುವ ಸುಂದರ ಪರಂಪರೆ ಎಲ್ಲೆಡೆ ಪಸರಿಸಲಿ

■ ಉದಯರಶ್ಮಿ ದಿನಪತ್ರಿಕೆ

**ಬಾಬಾನಗರದಲ್ಲಿ ನಡೆದ ಪಾನಿಸಾಹೇಬ್ ದೇವರ ಜಾತ್ರಾ ಮಹೋತ್ಸವದಲ್ಲಿ ಸಚಿವ ಎಂ.ಬಿ.ಪಾಟೀಲ ಅಭಿಮತ**

ವಿಜಯಪುರ: ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಸೋಮವಾರ ಬಬಲೇಶ್ವರ ಮತಕ್ಷೇತ್ರದ ತಿಕೋಟಾ ತಾಲೂಕಿನ ಬಾಬಾನಗರ ಗ್ರಾಮದಲ್ಲಿ ನಡೆದ ಪಾನಿಸಾಹೇಬ್ ದೇವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು, ಸರ್ವರ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಿಂದೂಮುಸ್ಲಿಂ ಸಮುದಾಯದವರು ಸಹೋದರರಂತೆ ಒಂದಾಗಿ ಜಾತ್ರೆಯನ್ನು ಆಚರಿಸುತ್ತಾ, ಭಾವೈಕ್ಯತೆ ಮತ್ತು ಸೌಹಾರ್ದತೆಯ ಸಂದೇಶವನ್ನು ಸಾರುತ್ತಿರುವುದು ಸಂತಸ ತಂದಿದೆ. ಧರ್ಮ, ಜಾತಿ, ಭೇದಗಳನ್ನು ಮೀರಿ ಪರಸ್ಪರ ಪ್ರೀತಿ, ಗೌರವ ಹಾಗೂ ಸಹಬಾಳ್ವೆಯಿಂದ ಬದುಕುವ ಈ ಸುಂದರ ಪರಂಪರೆ ಎಲ್ಲೆಡೆ ಪಸರಿಸಲಿ, ಸಮಾಜದಲ್ಲಿ ಶಾಂತಿಸೌಹಾರ್ದತೆ ಸದಾ ನೆಲೆಸಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಗ್ರಾಮದ ನಾನಾ ಮುಖಂಡರು, ಹಿರಿಯರು ಹಾಗೂ ಯುವಕರು ಉಪಸ್ಥಿತರಿದ್ದರು.

# ಅಪೌಷ್ಟಿಕತೆ ತಡೆಗಟ್ಟುವ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಕಾರ್ಯಕ್ರಮಕ್ಕೆ ಚಾಲನೆ

## ಪೌಷ್ಟಿಕ ಆಹಾರವೇ ಆರೋಗ್ಯವಂತ ಸಮಾಜದ ಬುನಾದಿ :ಜುಂಜರವಾಡ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಪೋಷಣ್ ಅಭಿಯಾನದ ಭಾಗವಾಗಿ ಪೌಷ್ಠಿಕಾಂಶದ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಲು ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳನ್ನು ರಾಷ್ಟ್ರೀಯ ಪೋಷಣ್ ಮಾಸಾಚರಣೆ ನಡೆಸಲಾಗುತ್ತಿದ್ದು ತಾಲೂಕ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಆಶ್ರಯದಲ್ಲಿ ಸೋಮವಾರ ಉಮರಜ ಅಂಗನವಾಡಿ ಕೇಂದ್ರದಲ್ಲಿ ಪೋಷಣ್ ಅಭಿಯಾನ ಯೋಜನೆಯಡಿ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಜ್ಯೋತಿ ಬೆಳಗಿಸುವ ಮೂಲಕ ಚಡಚಣ ಶಿಶು ಅಭಿವೃದ್ಧಿ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಸಾಹೇಬಗೌಡ ಜುಂಜರವಾಡ ಚಾಲನೆ ನೀಡಿದರು.

ಪೋಷಣ್ ಅಭಿಯಾನದಲ್ಲಿ ಮಕ್ಕಳು, ಹದಿಹರೆಯದ ಹೆಣ್ಣುಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಲ್ಲಿ ಅಪೌಷ್ಟಿಕತೆಯನ್ನು ತಡೆಗಟ್ಟಲು, ಜೊತೆಗೆ ಪೌಷ್ಟಿಕಾಂಶ ಆಹಾರದ ಮಹತ್ವದ ಕುರಿತು ಜಾಗೃತಿ ಮೂಡಿಸಿ ಅಗತ್ಯವಾದ ಪೌಷ್ಟಿಕಾಂಶವನ್ನು ಒದಗಿಸುವ ಮೂಲಕ ಅವರ ಆರೋಗ್ಯವನ್ನು ಸುಧಾರಿಸುವುದರ ಜೊತೆಗೆ ಆರೋಗ್ಯಕರ, ಸಶಕ್ತ ಸಮಾಜ ನಿರ್ಮಿಸುವದು ಈ ಅಭಿಯಾನದ ಮುಖ್ಯ ಉದ್ದೇಶ ಎಂದರು.

ವೈದ್ಯಾಧಿಕಾರಿ ಅಭಯ ಹುಂಡೇಕಾರ ಮಾತನಾಡಿ, ಗರ್ಭಿಣಿಯರು, ಬಾಣಂತಿಯರು ಯಾವುದೇ ಕಾರಣಕ್ಕೂ ಅಪೌಷ್ಟಿಕತೆಯಿಂದ ಹಾಗೂ ರಕ್ತಹೀನತೆಯಿಂದ ಬಳಲದಂತೆ ಸದಾ ನಿಗಾ ವಹಿಸಬೇಕು. ಇಲ್ಲದಿದ್ದಲ್ಲಿ ಎರಡೂ ಜೀವಗಳು ಅನಾರೋಗ್ಯಕ್ಕೆ ತುತ್ತಾಗುವ ಅಪಾಯಗಳು ಹೆಚ್ಚಾಗಲಿವೆ ಎಂದರು. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನೂತನ ಬಿರಾದಾರ ಮಾತನಾಡಿ, ಪೌಷ್ಟಿಕಾಂಶವು ಆರೋಗ್ಯಕರ ಸಮುದಾಯದ ಅಡಿಪಾಯವಾಗಿದೆ. ಪ್ರತಿಯೊಬ್ಬರೂ ಸಮತೋಲಿತ ಹಾಗೂ ಪೌಷ್ಟಿಕ ಆಹಾರ ಸೇವಿಸುವ ಕುರಿತು ಜಾಗೃತಿ ಹೊಂದಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ಎಸ್.ಎಲ್. ಮಾನೆ, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಶಿವಾನಂದ ಇರಮಾನೆ, ತಾ.ಪಂ. ನಿರ್ದೇಶಕ ಎಸ್. ಆರ್. ಕೊಟ್ಟಲಗಿ, ಮುಖಂಡ ಶಿವಾನಂದ ಹಿರೆಣ್ಣಿ, ಕುರಿ ಹಾಗೂ ಯಳಮೇಲಿ ಸೇರಿದಂತೆ ಅಂಗನವಾಡಿ ಮೇಲ್ವಿಚಾರಕಿ ಸುರೇಖಾ ಅಚ್ಚಿಗಾಂವ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

# ಅರ್ಜಿ ಹಿಂಪಡೆವರೆಗೂ ಒಂದು ತೊಟ್ಟು ನೀರು ಹರಿಸಬೇಡಿ



■ ಉದಯರಶ್ಮಿ ದಿನಪತ್ರಿಕೆ

**ಸುಪ್ರೀಂಕೋರ್ಟ್ನಲ್ಲಿ ಆಂಧ್ರ & ತೆಲಂಗಾಣ ನಮ್ಮ ನೀರಾವರಿ ಯೋಜನೆಗಳಿಗೆ ಸಲ್ಲಿಕೆ ಮಾಡಿರುವ ಅರ್ಜಿಗಳನ್ನು ಹಿಂಪಡೆಯಲಿ। ವಿಜಯಪುರದಲ್ಲಿ ನೀರಾವರಿ ಹೋರಾಟಗಾರ ಪಂಚಪ್ಪ ಕಲಬುರ್ಗಿ ಗುಡುಗು**

ವಿಜಯಪುರ: ಸುಪ್ರೀಂಕೋರ್ಟ್ನಲ್ಲಿ ಆಂಧ್ರ ಹಾಗೂ ತೆಲಂಗಾಣ ರಾಜ್ಯದವರು ನಮ್ಮ ನೀರಾವರಿ ಯೋಜನೆಗಳಿಗೆ ಸಲ್ಲಿಕೆ ಮಾಡಿರುವ ಅರ್ಜಿಗಳನ್ನು ಹಿಂಪಡೆಯುವವರೆಗೂ ಅವರಿಗೆ ನೀರು ಹರಿಸುವ ಕಾರ್ಯ ಮಾಡಬಾರದು, ಒಂದು ವೇಳೆ ರಾಜ್ಯ ಸರ್ಕಾರ ಜನರ ಕಣ್ಣಿಗೆ ಮಣ್ಣೆರೆಚಿದರೆ ಅದು ರಾಜ್ಯದ ಜನರಿಗೆ ಮಾಡುವ ದೊಡ್ಡ ದ್ರೋಹ ಎಂದು ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಹಾಗೂ ನೀರಾವರಿ ಹೋರಾಟಗಾರ ಪಂಚಪ್ಪ ಕಲಬುರ್ಗಿ ಗುಡುಗಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ಕುಡಿಯುವ ನೀರು ಎಂಬ ವಿಷಯ ಮುಂದಿಟ್ಟುಕೊಂಡು ರೈತರ ಹೊಲಗಳಿಗೆ ನೀರು ಹರಿಸುವ ಕಾರ್ಯ ಮಾಡುತ್ತಿಲ್ಲ, ಆದರೆ ಅದಕ್ಕೆ ವ್ಯತಿರಿಕ್ತವಾಗಿ ತೆಲಂಗಾಣಕ್ಕೆ ನೀರು ಹರಿಸಲು ಮುಂದಾಗಿದ್ದಾರೆ, ಒಂದು ವೇಳೆ ಈ ರಾಜ್ಯಗಳಿಗೆ ನೀರು ಹರಿಸಿದರೆ ಈ ರಾಜ್ಯ ಸರ್ಕಾರ ರಾಜ್ಯದ ಜನರಿಗೆ ಮಾಡುವ ದೊಡ್ಡ ದ್ರೋಹ ಎಂದರು.

ಆಂಧ್ರ ಹಾಗೂ ತೆಲಂಗಾಣ ರಾಜ್ಯದವರು ನಮ್ಮ ನೀರಾವರಿ ಯೋಜನೆಗಳಿಗೆ ದೊಡ್ಡ ರೀತಿಯಲ್ಲಿ ಕೊಕ್ಕೆ ಹಾಕುತ್ತಾರೆ, ಅವರು ವಿಘ್ನ ಸಂತೋಷಿಗಳು, ಹೀಗಾಗಿ ಮೊದಲು ಅವರು ನಮ್ಮ ನೀರಾವರಿ ಯೋಜನೆಗಳಿಗೆ ಅವರು ಹಾಕಿರುವ ರಿಟ್ ಪಿಟಿಷನ್‌ಗಳನ್ನು ತೆರವುಗೊಳಿಸಿಕೊಳ್ಳುವಂತೆ ಹೇಳಿ, ನಿಮಗೆ ತಾಕತ್ತ ಇದ್ದರೆ ಈ ಕಾರ್ಯ ಮಾಡಿ ಎಂದರು. ತಮಿಳುನಾಡು, ಆಂಧ್ರಪ್ರದೇಶ ಸ್ವಲ್ಪವೇ ಸ್ವಲ್ಪ ನೀರು ಬಳಕೆ ಮಾಡಿಕೊಂಡರೂ ಸಹ ಕಾನೂನಾತ್ಮಕ ಹೋರಾಟ ನಡೆಸುತ್ತವೆ, ಆದರೆ ನಮ್ಮ ಭೀಮೆಯ 50 ಟಿಎಂಸಿ ನೀರನ್ನು ಬಳಕೆ ಮಾಡಿಕೊಂಡರೂ ಸಹ ನಮ್ಮ ರಾಜ್ಯ ಸರ್ಕಾರಗಳು ಮೌನ ವಹಿಸುತ್ತದೆ, ಇದು ಉತ್ತರ ಕರ್ನಾಟಕದ ಭಾಗದ ನಿರ್ಲಕ್ಷ್ಯತೆಯ ಪ್ರತೀಕವೇ ಎಂದು ಪ್ರಶ್ನಿಸಿದರು.

### ಹೊಲಗಾಲುವೆಗಳಿಗೆ ನೀರು ಹರಿಸಿ

**ಆಲಮಟ್ಟಿ ಆಣೆಕಟ್ಟಿನಲ್ಲಿ ಹಾಗೂ ನಾರಾಯಣಪೂರ ಜಲಾಶಯದಿಂದ ನೀರಿನ ಲಭ್ಯತೆ ಸಮರ್ಪಕವಾಗಿದೆ, ಹೀಗಾಗಿ ರೈತರ ಹೊಲಗಳಿಗೆ ನೀರು ಹರಿಸಿದರೆ ಮೇವು ಹಾಗೂ ತನ್ನ ಬದುಕಿಗೆ ಆಗುವ ಪದಾರ್ಥಗಳನ್ನಾದರೂ ಬೆಳೆದುಕೊಳ್ಳಬಹುದು ಎಂದರು. ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಯ ಆಧಾರಿತ ಎಲ್ಲ ನೀರಾವರಿ ಯೋಜನೆಗಳಿಗೂ ಸಹ ನೀರು ಹರಿಸುವ ಕೆಲಸ ಮಾಡಬೇಕು ಎಂದರು.**

# ಡೋಣೂರ ಗ್ರಾಮದ ಅಮೋಘಸಿದ್ದೇಶ್ವರನ ಮಳೆ ಹೇಳಿಕೆಯ ಭವಿಷ್ಯವಾಣಿ ಈ ಬಾರಿಯೂ ಸತ್ಯವಾಯಿತು

## ರೈತರ ಭಕ್ತಿಗೆ ಒಲಿದ ಶ್ರೀ ಅಮೋಘಸಿದ್ದೇಶ್ವರ :ಗ್ರಾಮದಲ್ಲಿ ಮಳೆ ಆರ್ಭಟ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: "ಮೀರಗಾ ಮಿಂಚು ಮಳೆಗೆ ಮಂಡಿ,(ಬಿತ್ತುವ ಕೂರಿಗೆ) ನಡುವೆ ಟೊಳ್ಳು ಉಳಿತಲೇ...ಉತ್ತರಿ–ಹಸ್ತ ಆಯಿತು, ಹೋಯ್ತು...ಸ್ವಾತಿ ದೇಶಕ್ಕೆ ಸಂಪೂರ್ಣ" ಹಿಡಿ ಭಂಡಾರ ಎಂದು ಯುಗಾದಿ ಹಬ್ಬದ ದಿನವೇ ಡೋಣೂರ ಗ್ರಾಮದ ಆರಾಧ್ಯ ದೈವ ಶ್ರೀ ಅಮೋಘಸಿದ್ದೇಶ್ವರ ಭವಿಷ್ಯವಾಣಿ ಹೊರ ಬಂದಿತ್ತು. ಆಗಲೇ ಗ್ರಾಮಸ್ಥರು ಗಲಿಬಿಲಿಗೊಂಡು ಮುತ್ಯಾ ಹೇಳಿದರೆ ಮುಗಿತು ಮುಂಗಾರು ಮಳೆ ಆಗೋಲ್ಲ ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಯಾಕೆಂದರೆ ಈ ಹಿಂದೆ ಡೋಣೂರ ಅಮೋಘಸಿದ್ದೇಶ್ವರನ ಮಳೆ ಹೇಳಿಕೆ ಸುಳ್ಳಾಗಿಲ್ಲ ಈ ಬಾರಿಯೂ ಸತ್ಯವಾಯಿತು.

ನಾಡಿನಲ್ಲಿ ಮುಂಗಾರು, ಹಿಂಗಾ–ರಿನ ಎಲ್ಲ ಮಳೆಗಳು ಕೈ ಕೊಟ್ಟವು. ಭೀಕರ ಬರಗಾಲದ ಛಾಯೆ, ಜನ ಜಾನುವಾರಗಳಿಗೆ ಮೇವಿನ ಕೊರತೆ, ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಿ ರೈತರು ಭಯದಲ್ಲಿಯೇ ದಿನ ದೂಡಿದ್ದರು.

ಆದರೆ ಶ್ರೀ ಅಮೋಘಸಿದ್ದೇಶ್ವರನ ದೈವಿಕ ಶಕ್ತಿ ಗೊತ್ತಿರುವ ಗ್ರಾಮಸ್ಥರು ಗಣೇಶ ಚೌತಿಗೆ ನಡೆಯುವ ಶ್ರೀ ಅಮೋಘಸಿದ್ದೇಶ್ವರನ ಜಾತ್ರೆಯಲ್ಲಿ ಹೊರಡುವ ಪಲ್ಲಕ್ಕಿಯು, ಗ್ರಾಮದ ಅಗಸಿ ಪ್ರವೇಶವಾಗುತ್ತಿದ್ದಂತೆ ರೈತರು ಒಟ್ಟಾಗಿ ಪಲ್ಲಕಿಗೆ ಅಡ್ಡಗಟ್ಟಿ ಮಳೆ ಬೇಕು ಎಂದು ಪಟ್ಟು ಹಿಡಿದಾಗ, ಪೂಜಾರಿ ನಿಂಗಪ್ಪ ಮುತ್ಯಾ ಒಡೆಯರ್ ಮತ್ತೆ ಕಾರ್ಣಿಕ ನೀಡಿದು, ಭಕ್ತಿಯಿಂದ ಸಪ್ತಾಹ ಮಾಡಿ, ಎತ್ತಿನ ಬಂಡಿಯಲ್ಲಿ ಕೃಷ್ಣಾ ಜಲವನ್ನು ತೆಗೆದುಕೊಂಡು ಗ್ರಾಮದ ಎಲ್ಲ ದೇವರುಗಳಿಗೆ ಜಲಾಭಿಷೇಕ ಮಾಡಬೇಕು. ಅಷ್ಟೇ ಅಲ್ಲ ಗ್ರಾಮದಲ್ಲಿರುವ ಎಲ್ಲ ಸಮುದಾಯಗಳ ರುದ್ರಭೂಮಿಗಳಿಗೆ ಡೋಣಿ ನದಿ ನೀರನ್ನು ಸಮರ್ಪಿಸಬೇಕು. ಆಗ ನಿಮಗೆ ಬಂದಿರುವ ಕಷ್ಟ ನಿವಾರಣೆಯಾಗಿ ಮಳೆ ಬೆಳೆ ಕೊಡುತ್ತೇನೆ ಎಂದು ಹೇಳಿದರು.



ತಕ್ಷಣವೇ ಗ್ರಾಮಸ್ಥರೆಲ್ಲರೂ ಜಾತಿ–ಧರ್ಮ ಬೇಧ–ಬಾವ ಇಲ್ಲದೇ ದಿ.23.09.2026 ರ ಬುಧವಾರವೇ ಸಪ್ತಾಹ ಪ್ರಾರಂಭಿಸಿ 5 ದಿನಗಳ ಕಾಲ ಹಗಲು–ರಾತ್ರಿ ನಿರಂತರ ಭಜನೆ ಪ್ರಾರಂಭಿಸಿದರು. ಭಜನೆ ಪ್ರಾರಂಭವಾದ ಮೂರೇ ದಿನಗಳಲ್ಲಿ ಗ್ರಾಮದಲ್ಲಿ ಮಳೆ ಆರ್ಭಟಿಸಿ ಹೊಲದಲ್ಲಿನ ಬದುಗಳು ತುಂಬಿ ಒಣಗಿ ಹೋಗುತ್ತಿದ್ದ ಬೆಳೆಗಳು ಒಂದೇ ದಿನದಲ್ಲಿ ಹಚ್ಚ ಹಸಿರಾಗಿ ರೈತರ ಮುಖದಲ್ಲಿ ಮಂದಹಾಸ ಮೂಡಿತು.

ದಿ.27 ರಂದು ರವಿವಾರ ಸಂಜೆ ಡೋಣೂರ ಗ್ರಾಮದ ಹೊರ ಭಾಗದಲ್ಲಿರುವ ಪ್ರೌಢಶಾಲಾ ಆವರಣದಲ್ಲಿ ಕೃಷ್ಣಾ ಜಲ ತುಂಬಿಕೊಂಡು ಬಂದು ನಿಂತಿದ್ದ 25 ಎತ್ತಿನ ಬಂಡಿಗಳನ್ನು ಹಾಗೂ 50 ಕ್ಕೂ ಹೆಚ್ಚಿನ ಸಂಖ್ಯೆಯ ಸುಮಂಗಲೇಯರು. ಆಲಮಟ್ಟಿಯ ಚಂದ್ರಗಿರಿಯಿಂದ ಪಾದಯಾತ್ರೆಯಲ್ಲಿಯೇ ತುಂಬಿದ ಕೊಡಗಳನ್ನು ಹೊತ್ತು ತಂದಿದ್ದರು ಅವರನ್ನು ದಿ.28 ಸೋಮವಾರ ದಂದು ಡೊಳ್ಳು, ಹಲಗೆ, ಬಾಜಿ–ಭಜಂತ್ರಿಗಳೊಂದಿಗೆ ಭವ್ಯ ಸ್ವಾಗತ ಮಾಡಿಕೊಂಡು ಗ್ರಾಮದ ಶ್ರೀ ಅಮೋಘಸಿದ್ದೇಶ್ವರನಿಗೆ ಪವಿತ್ರ ಕೃಷ್ಣಾ ಜಲವನ್ನು ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಗ್ರಾಮದ ಸಮಸ್ತ ದೇವರುಗಳಿಗೆ ಕೃಷ್ಣಾ ಜಲಾಭಿಷೇಕ ನೆರವೇರಿಸಿ ಮಹಾಪೂಜೆ ನೆರವೇರಿಸಿದರು.

"ನಮ್ಮೂರ ಆರಾಧ್ಯ ದೈವ ಶ್ರೀ ಅಮೋಘಸಿದ್ದೇಶ್ವರ ಕಾರ್ಣಿಕ ನುಡಿಗಳು ಎಂದಿಗೂ ಸುಳ್ಳಾಗುವುದಿಲ್ಲ. ಮಳೆ ಕುರಿತಾಗಿ ಇಲ್ಲಿನ ನಿಂಗಪ್ಪ ಒಡೆಯರ್ ಪೂಜಾರಿಗಳು ಹೇಳಿದ ಕಾರ್ಣಿಕ ನುಡಿಯಂತೆ ನಾವು ಕೃಷ್ಣಾ ನದಿ ಜಲವನ್ನು ತಂದು ಜಲಾಭೀಷೇಕ ಮಾಡಿದ್ದೇವೆ. ನಮ್ಮ ಭಾಗಕ್ಕೆ ಸ್ವಲ್ಪ ಮಳೆಯಾಗಿದೆ."

■ **ಜೊತೆಪ್ಪ ಜ್ಯೋತಿ**
ಗ್ರಾ.ಪಂ.ಮಾಜಿ ಸದಸ್ಯರು,
ಡೋಣೂರ

### ಬಂದಿರುವ ಕಷ್ಟ ಬದಿಗೆ ಸರಿಸುವೆ

**"ಸೊಕ್ಕು ಬಂದಾದಲೇ ನಿಮಗ್... ವಾಹನದಲ್ಲಿ ಕೃಷ್ಣಾ ಜಲ ತಂದರೆ, ಕೆಲಸ ಆಗಲ್ಲ... ಬಸವಣ್ಣನ ಸಿಂಗರಿಸಿ ಎತ್ತಿನ ಬಂಡಿಯಲ್ಲಿಯೇ ನೀರು ತರಬೇಕು... ಇಲ್ಲ ಪಾದಯಾತ್ರೆಯಲ್ಲಿಯೇ ನೀರು ತರಬೇಕು. ನಿಮಗೆ ಬಂದಿರುವ ಕಷ್ಟ ಬದಿಗೆ ಸರಿಸುವೆ ಎಂದು ಕೂಗಾಡಿದ ಶ್ರೀ ಅಮೋಘಸಿದ್ದೇಶ್ವರ ಪೂಜಾರಿ ನಿಂಗಣ್ಣ ಮುತ್ಯಾ ಒಡೆಯರ."**

**ಮಳೆ ಕುರಿತಾಗಿ ಡೋಣೂರಿನ ಶ್ರೀ ಅಮೋಘಸಿದ್ದೇಶ್ವರನ ಕಾರ್ಣಿಕ ನುಡಿಗಳು ನೂರಕ್ಕೆ ನೂರು ಸತ್ಯವಾಗಿವೆ. ನಾವು ಅವರ ಕಾರ್ಣಿಕ ನುಡಿ ಆಧ–ರಿಸಿಯೇ ಮಳೆ ಪ್ರಮಾಣಕ್ಕೆ ತಕ್ಕಂತೆ ಬೆಳೆ ಬಿತ್ತನೆ ಮಾಡುತ್ತೇವೆ. ನಮ್ಮೂರ ಭಾಗದಲ್ಲಿ ಬೆಳೆಗಳು ಒಣಗಿ ಹೋಗುತ್ತಿದ್ದವು ಆ ಸಂದರ್ಭದಲ್ಲಿ ನಾವು ಚೌತಿ ಕಾರ್ಣಿಕ ನುಡಿ ಕೇಳಿ ಸಪ್ತಾಹ ಹಮ್ಮಿಕೊಂಡಿದ್ದೆವು ಈಗ ಮಳೆಯಾಗಿದ್ದು ನಮಗೆಲ್ಲ ಸಂತೋಷವಾಗಿದೆ.**

■ **ಶಿವಾನಂದ ಮರನೂರ,**
**ಮಾಜಿ ಗ್ರಾ. ಪಂ. ಸದಸ್ಯರು,**
**ಡೋಣೂರ**

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR